MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111


YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 288 | ಮಂಗಳವಾರ :02-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 288 | TUESDAY : 02-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಪಾಕ್ ವಿರುದ್ಧ ಮೋದಿ ಗುಡುಗು




**ಟಿಯಾನ್‌ಜಿನ್, ಸೆ. 1–** ಭಯೋತ್ಪಾದನೆ ಜಾಗತಿಕ ಶಾಂತಿಗೆ ಮತ್ತು ಭದ್ರತೆಗೆ ಅತಿದೊಡ್ಡ ಬೆದರಿಕೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಪಾಕಿಸ್ತಾನದ ಪ್ರಧಾನಿ ಶಹಬಾಸ್ ಷರೀಫ್ ಎದುರೇ ಪಹಾಲ್ಗಾಮ್ ದಾಳಿಯನ್ನು ಖಂಡಿಸಿದರು. ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನದ ಧೋರಣೆ ಸಹಿಸಲು ಸಾಧ್ಯವಿಲ್ಲ ಎಂದು ಖಡಕ್ ಸಂದೇಶ ರವಾನಿಸಿದರು.


ಕಳೆದ 4 ದಶಕಗಳಿಂದ ಭಾರತ ಭಯೋತ್ಪಾದನೆಯ ಭಾರವನ್ನು ಹೊರುತ್ತಿದೆ. ಇತ್ತೀಚೆಗೆ ಜಮ್ಮು–ಕಾಶ್ಮೀರದ ಪಹಾಲ್ಗಾಮ್ ನಲ್ಲಿ ನಡೆದ ಉಗ್ರರ ದಾಳಿಯ ಕರಾಳ ಮುಖವನ್ನು ನಾವು ನೋಡಿದ್ದೇವೆ. ಈ ದಾಳಿಯು ಮಾನವೀಯತೆಯಲ್ಲಿ ನಂಬಿಕೆ ಹೊಂದಿರುವ ಪ್ರತಿಯೊಂದು ದೇಶ ಮತ್ತು ವ್ಯಕ್ತಿಗೆ ಬಹಿರಂಗ ಸವಾಲಾಗಿತ್ತು ಎಂದು ಹೇಳಿದರು.

ಕೆಲ ದೇಶಗಳು ಭಯೋತ್ಪಾದಕನಿಗೆ ಬಹಿರಂಗವಾಗಿಯೇ ಕುಮ್ಮಕ್ಕು ನೀಡುತ್ತಿದೆ. ಪ್ರತಿಯೊಂದು ರೂಪ ಮತ್ತು ಬಣ್ಣದಲ್ಲೂ ಭಯೋತ್ಪಾದನೆಯನ್ನು ಸರ್ವಾನುಮತದಿಂದ ವಿರೋಧಿಸಬೇಕು ಎಂದು ಕರೆ ನೀಡಿದರು.

ಸದಸ್ಯ ರಾಷ್ಟ್ರಗಳು ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿ ಅಳವಡಿಸಿಕೊಳ್ಳುವ ಅಗತ್ಯವಿದೆ. "ಭಯೋತ್ಪಾದನೆ ಮತ್ತು ಉಗ್ರವಾದ ಮಾನವೀಯತೆಗೆ ಜಂಟಿ ಸವಾಲು. ಈ ಬೆದರಿಕೆಗಳು ಇರುವವರೆಗೆ ಯಾವುದೇ ದೇಶ ಅಥವಾ ಸಮಾಜ ತನ್ನನ್ನು ತಾನು ಸುರಕ್ಷಿತವೆಂದು ಪರಿಗಣಿಸಲು ಸಾಧ್ಯವಿಲ್ಲ" ಎಂದು ಹೇಳಿದ್ದಾರೆ

ಶಾಂಘೈ ಸಹಕಾರ ಶೃಂಗಸಭೆಯ ಸಮಗ್ರ ಅಧಿವೇಶನದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರ ಉದ್ಘಾಟನಾ ಹೇಳಿಕೆಯ ನಂತರ ಮಾತನಾಡದ **(2ನೇಪುಟಕ್ಕೆ)**

## ಧರ್ಮಸ್ಥಳದಲ್ಲಿ ಬಿಜೆಪಿ ಯಾತ್ರೆ ಡೋಂಗಿತನ



**ಬೆಂಗಳೂರು, ಸೆ. 1–** ಬಿಜೆಪಿ ಧರ್ಮಸ್ಥಳದಲ್ಲಿ ರಾಜಕೀಯ ಮಾಡುತ್ತಿದೆ. ಧರ್ಮಸ್ಥಳದಲ್ಲಿ ಬಿಜೆಪಿ ನಡೆಸಿರುವ ಯಾತ್ರೆ ರಾಜಕೀಯ ಯಾತ್ರೆ. ಅದರಿಂದ ಅವರಿಗೆ ರಾಜಕೀಯ ಲಾಭ ಸಿಗಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಮ್ಮ ಹುಟ್ಟೂರು ಮೈಸೂರಿನ ಸಿದ್ಧರಾಮನ ಹುಂಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ರಚನೆಯಾದಾಗ ಬಿಜೆಪಿ ಯಾಕೆ ಯಾತ್ರೆ ಮಾಡಲಿಲ್ಲ ಎಂದು ಪ್ರಶ್ನಿಸಿ, ಇದು ಬಿಜೆಪಿಯ ಡೋಂಗಿತನ ಅಲ್ಲವೆ ಎಂದರು.

ಬಿಜೆಪಿಯಿಂದ ಚಾಮುಂಡಿ ಚಲೋ ಯಾತ್ರೆ ನಡೆಸುವ ಬಗ್ಗೆಯೂ ಪ್ರತಿಕ್ರಿಯಿಸಿದ ಅವರು, ಹಿಂದೂತ್ವ ಗಟ್ಟಿಯಾಗುತ್ತದೆ ಎಂದು ಬಿಜೆಪಿ ಈ ಯಾತ್ರೆಗಳ ಪ್ಲಾನ್ ಮಾಡುತ್ತಿದೆ. ಇವರಿಂದ ಹಿಂದೂತ್ವ ಗಟ್ಟಿಯಾಗಲ್ಲ. ನಾನು ಕೂಡಾ ಹಿಂದೂ. ನಮ್ಮ ಊರಿನಲ್ಲಿ ರಾಮಮಂದಿರ ಕಟ್ಟಿಸಿದ್ದೇನೆ ಎಂದರು.

ಹಿಂದೂಗಳು ಎಂದರೆ ಸುಳ್ಳು ಹೇಳುವುದು, ಅಪಪ್ರಚಾರ ಮಾಡುವವರು ಅಲ್ಲ. ಮನುಷ್ಯತ್ವ ಇರುವವರು ಹಿಂದೂಗಳ ಅಮಾನವೀಯ ನಡವಳಿಕೆ ತೋರುವವರು ಹಿಂದೂಗಳಲ್ಲ ಎಂದರು.

ಬಿಜೆಪಿಯವರು ಎಲ್ಲದರಲ್ಲೂ ಸುಳ್ಳು ಹೇಳುತ್ತಿದ್ದಾರೆ. ದಸರಾ ವಿಚಾರದಲ್ಲೂ ರಾಜಕೀಯ ಮಾಡುತ್ತಿದ್ದಾರೆ. ಅವರು ತಮ್ಮ ಸ್ವಂತ ಮನೆಯನ್ನು ಬೇಕಾದರೆ ರಾಜಕೀಯಕಕ್ಕೆ ಬಳಸಿಕೊಳ್ಳುತ್ತಾರೆ. ಹಿಂದೂಗಳು ಎಲ್ಲ ಬಿಜೆಪಿ ಜತೆ ಇಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಚಾಮುಂಡಿಬೆಟ್ಟ ಹಿಂದೂಗಳದಲ್ಲ ಎಂಬ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಡಿ.ಕೆ.ಶಿವಕುಮಾರ್ ಹೇಳಿರುವುದು **(2ನೇಪುಟಕ್ಕೆ)**

## ಗಣೇಶ ವಿಸರ್ಜನೆ ವೇಳೆ ಮುಸ್ಲಿಂ ಸಹೋದರರಿಂದ ಅನ್ನ ಸಂತರ್ಪಣೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.01–**ನಗರದ ಯುವ ಕಾಂಗ್ರೆಸ್ ಮುಖಂಡರಾದ ಮಹಮ್ಮದ್ ರಹಮತ್ ಅಲಿ ಮತ್ತು ಸಹೋದರರಿಂದ ಭಾವೈಕ್ಯತೆ ಸಂದೇಶ ಸಾರುವ ಗಣೇಶ ವಿಸರ್ಜನೆಯಲ್ಲಿ ಪಾಲ್ಗೊಳ್ಳುವ ಹಿಂದೂ ಸಹೋದರರಿಗೆ ಅನ್ನ ಪ್ರಸಾದ ಕಾರ್ಯಕ್ರಮವನ್ನ ಭಾನುವಾರದಂದು ಹಮ್ಮಿಕೊಂಡು ಸಹೋದರತ್ವ ಸಂದೇಶ ಸಾರಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎ.ಬಿ ಉಪ್ಪಳ ಮಠ ವಕೀಲರು, ಮತ್ತು ಮುಸ್ಲಿಮ್ ಸಮುದಾಯದ ಮುಖಂಡರು ಸೈಯದ್ ಸಜ್ಜದ್ ಹುಸೇನಿ ಮತವಾಲೆ ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಸ್ವಾಮಿ, ವೀರಶೈವ ಲಿಂಗಾಯತ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಅರುಣ್ ಚಂದ, ಜಗದೀಶ್ ಓತೂರು,ಸೈಯದ್ ನಜಿರುದ್ದೀನ್ ಖಾದ್ರಿ, ಮಹಮ್ಮದ್ ಇಸ್ಮಾಯೀಲ್ ಸಾಬ್ , ಸೈಯದ್ ಖಾಲಿದ್ ಖಾದ್ರಿ, ಹರಿಹರ ಗೌಡ, ಆದಮ್ ಬೇಗ್, ಸೈಯದ್ ರಹಮತ್ ಅಲಿ ಜಾಗರ್ದಾರ್, ಶ್ರೀಧರ್ ಸ್ವಾಮಿ, ಗುಮ್ಮ ಬಸವರಾಜ ವಕೀಲರು, ಸೈಯ್ಯದ್ ಹುಸೇನ್ , ಪುರಸಭೆ ಸದಸ್ಯರಾದ ಹುಸೇನ್ ಬಾಷಾ,ಮಹಮ್ಮದ್ ಹಬೀಬ್, ಮಹಮ್ಮದ್ ಹಶೀಮ್ ಖುರೇಷಿ, ಉಮಾಪತಿ, ಮಾನ್ವಿ ಪೊಲೀಸ್ ಠಾಣೆಯ ಸರ್ಕಲ್ ಇನ್ಸೆಕ್ಟರ್ ಸೋಮಶೇಖರ್ ಕೆಂಚರೆಡ್ಡಿ, ಪ್ರೀತಮ್ ಕೊಡ್ಲಿ, ಸೈಯದ್ ಆರೀಫ್ ಖಾದ್ರಿ, ಹಂಪಯ್ಯ ನಾಯಕ, ಎಂ ಡಿ ಇಸ್ಮಾಯಿಲ್ ಮಾಡಗಿರಿ, ಮಹಿಬೂಬ್ ಖುರೇಶಿ, ನಾಸೀರ್ ಅಲಿ,ವಿರುಪಾಕ್ಷಿ ನಾಯಕ, ಕಾಮೇಶ್ ಮಂದಕಲ್, ಅಬ್ಬು ಪಟೇಲ್, ಶಂಶು ಖುರೇಷಿ, ಸಮೀರ್, ಸತ್ತಾರ್, ಬಂದೇನವಾಜ್, ಇನ್ನಿತರರು ಯುವಕರು ಭಾಗವಹಿಸಿ ಯಶಸ್ವಿಗೊಳಿಸಿದರು.

## 25 ವರ್ಷಗಳ ಬಳಿಕ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೀಲನ ಮತ್ತು ಶಾಲೆಗೆ ದೇಣಿಗೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.01–**ನಗರದ ಶ್ರೀಪಂಪಾ ವಿರೂಪಾಕ್ಷೇಶ್ವರ ಪ್ರಾಥಮಿಕ ಮತ್ತು ಪ್ರೌಢಶಾಲೆ ಕಲ್ಮಠ ಮಾನ್ವಿಯ 1998–1999ನೇ ಸಾಲಿನ ಎಸ್‌ಎಸ್‌ಎಲ್‌ಸಿ ಬ್ಯಾಚಿನ ವಿದ್ಯಾರ್ಥಿಗಳ ಸ್ನೇಹ ಸಮ್ಮೀಲನ ಕಾರ್ಯಕ್ರಮದಲ್ಲಿ ಹತ್ತು ಹಲವು ಬಗೆಯ ಸವಿನೆನಪುಗಳ ಮಂಥನ ಭಾನುವಾರ ಸಾಕ್ಷಿಯಾಯಿತು.

ನಗರದ ಕಲ್ಮಠ ಶಾಲಾ ಸಭಾಂಗಣದಲ್ಲಿ 1998ರಿಂದ 1999ರ ಅವಧಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪೂರೈಸಿದ ಹಳೆಯ ವಿದ್ಯಾರ್ಥಿಗಳು ಒಂದೆಡೆ ಸೇರುವ ಮೂಲಕ 25 ವರ್ಷಗಳ ಹಳೆಯ ನೆನಪುಗಳನ್ನು ಪುನರ್ಮನನ ಮಾಡಿಕೊಂಡ ಬಗೆ ಕಂಡುಬಂತು. ಶಾಲೆಯ ಹಳೆಯ ವಿದ್ಯಾರ್ಥಿಯೂ ಆದ ಶ್ರೀಬಸವಶ್ರೀ ನೌಕರರ ಪತ್ತಿನ ಸಹಕಾರಿ ಮಾನ್ವಿ ಶಾಖೆಯ ಮ್ಯಾನೇಜರ್ ಚಂದ್ರಮೌಳಿ ಬೆಟ್ಟದೂರು, ಉದ್ಯಮಿ ಕೆ.ರಾಜಶೇಖರ್ ಯಾದವ್ ಹಾಗೂ ಡಾ.ಸಕಲೇಶ್ ಪಾಟೀಲ್ ಬೆಟ್ಟದೂರು, ವೀರಭದ್ರಗೌಡ, ರವಿ ಕುಮಾರ್ ಸಾಹುಕಾರ, ಸಂತೋಷಕುಮಾರ ಹಾಗೂ ಶಿಲ್ಪ ಶಾಂತಲ ಸುವರ್ಣ

## ಸಾರಿಗೆ ಸಿಬ್ಬಂದಿಗಳಿಗೆ ಡೆಂಗ್ಯೂ ಜಾಗೃತಿ




ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.01–**ಪಟ್ಟಣದಸಾರಿಗೆ ಘಟಕದ ಅಧಿಕಾರಿಗಳು, ಮೆಕ್ಯಾನಿಕ್‌ಗಳು ಸೇರಿ ಸಿಬ್ಬಂಧಿಗಳಿಗೆ ಆರೋಗ್ಯ ಇಲಾಖೆ ವತಿಯಿಂದ ಡೆಂಗ್ಯೂ ಜ್ವರ ಹರಡುವ ಮತ್ತು ಅದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಶನಿವಾರ ಜಾಗೃತಿ ಕಾರ್ಯಕ್ರಮ ನಡೆಯಿತು.

ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್ ಮಾತನಾಡಿ, ಬಸ್ ಡಿಪೋದಲ್ಲಿ ಟೈರ್ ಸಂಗ್ರಹ, ಘನ ತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹವಾಗುತ್ತದೆ. ಈ ನೀರಿನಲ್ಲಿ ಈಡಿಸ್ ಇಜೆಕ್ಟ್ ಲಾರ್ವಾ ಮತ್ತು ಸೊಳ್ಳೆ ಉತ್ಪತ್ತಿಯಾಗುತ್ತವೆ. ಇದನ್ನು ತಡೆಯಲು ಘನತ್ಯಾಜ್ಯ ವಸ್ತುಗಳನ್ನು ಮತ್ತು ಟಯರ್‌ಗಳನ್ನು ನೀರು ಸಂಗ್ರಹವಾಗದ ಸ್ಥಳದಲ್ಲಿ ಇಡಬೇಕು. ನಿರುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಿ ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಎಂದರು.

ಡೆಂಗ್ಯೂ ವೈರಸ್ ಈಡಿಸ್ ಸೊಳ್ಳೆ ಕಚ್ಚುವುದರಿಂದ ಹರಡುತ್ತದೆ. **(2ನೇಪುಟಕ್ಕೆ)**

## ಅರಕೇರಾದಲ್ಲಿ ಚಂಡಿ ಮೇಳದೊಂದಿಗೆ ಅದ್ದೂರಿಯಾಗಿ ಗಣೇಶ ವಿಸರ್ಜನೆ



ಯುವ ಮಾರ್ಗ ಸುದ್ದಿ

**ಅರಕೇರಾ,ಸೆ.01–**ಪಟ್ಟಣದ ನಾಲ್ಕನೇ ವಾರ್ಡ್ ನ ಶ್ರೀ ಆಂಜಿನಯ್ಯ ದೇವಸ್ಥಾನದಲ್ಲಿ ಗಜಾನನ ಯುವ ಸಮಿತಿ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶನನ್ನು ಭಾನುವಾರ ವಿಸರ್ಜನೆ ಮಾಡಲಾಯಿತು.

ಉಡುಪಿ ಮೂಲದ ಚಂಡಿ ಮೇಳದೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ಕಂಡಿತು. ಇದಕ್ಕೂ ಮುನ್ನ ಗಣಪತಿಗೆ ವಿಶೇಷ ಪೂಜೆ ನೆರವೇರಿಸಿ, ಭಕ್ತರಿಗೆ ಅನ್ನ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಭಕ್ತರು ಕಡುಬು, ಹೋಳಿಗೆ, ಕರ್ಜಿಕಾಯಿ ನಾನಾ ಬಗೆಯ ತಿನಿಸು, ಹಣ್ಣ ಹಂಪಲುಗಳನ್ನು ದೇವರಿಗೆ ನೈವೆದ್ಯ ಅರ್ಪಿಸಿ ಹರಕೆಗಳನ್ನು ತೀರಿಸಿದರು. ನಂತರ ಮಹಾ ಮಂಗಳಾರತಿ ನೆರವೇರಿಸಿದರು ಹಾಗೂ ಚಂಡಿ ಮೇಳದ ತಂಡಕ್ಕೆ ಪಟ್ಟಣದ ಹಿರಿಯ ಮುಖಂಡರು ಸನ್ಮಾನಿಸಿದರು.

ಮಲ್ಲಿಕಾರ್ಜುನಯ್ಯ ಸ್ವಾಮಿ ಹಿರೇಮಠ, ಹನುಮಂತ್ರಾಯ ಪೂಜಾರಿ, ರಾಚಯ್ಯ ಸ್ವಾಮಿ ಮಠಪತಿ, ಸತ್ಯನಾರಾಯಣಗೌಡ ಪೋಲಿಸ್ ಪಾಟೀಲ್, ಕೆ.ಅನಂತರಾಜ ನಾಯಕ, ತಿಮ್ಮಪ್ಪ ನಾಯಕ ಪೊಲೀಸ್ ಪಾಟೀಲ್, ಕೆ.ಭಗವಂತ್ರಾಯ ನಾಯಕ, ಶೇಖರಪ್ಪ ಗೌಡ ಮಾಪಾ, ಪ್ರದೀಪ ಪೂಜಾರಿ, ರವಿ ನಾಯಕ, ವರದರಾಜ ನಾಯಕ, ಮಲ್ಲಿಕಾರ್ಜುನ ಸಾಹುಕಾರ, ಕೆ.ವಿರೇಶ ಸಾಹುಕಾರ, ಬೂದೆಪ್ಪ ಸಾಹುಕಾರ, ಗಂಗಯ್ಯ ಸ್ವಾಮಿ, ಮುದುಕಪ್ಪ ಮೆಣಸಿನಕಾಯಿ, ಶರಬಣ್ಣ ಕುಂಬಾರ ಇತರರಿದ್ದರು.

## ಸೈಬರ್ ವಂಚನೆ, ಜಾಗೃತಿ ಅಭಿಯಾನ : ಅಹ್ಮದ್ ಅಲಿ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಸೆ.02–**ಡಿಜಿಟಲ್ ಸ್ವಾತಂತ್ರ್ಯಕ್ಕಾಗಿ ಸೈಬರ್ ವಂಚನೆ, ಜೂಜಾಟ ಮತ್ತು ಗೇಮಿಂಗ್ ವ್ಯಸನದಿಂದ ಯುವ ಪೀಳಿಗೆಯನ್ನು ಮುಕ್ತಗೊಳಿಸಲು ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಎಂದು ಸ್ಟಾಲಿಡಾರಿಟಿ ಯುತ್ ಮೊಮೆಂಟ್ ಕರ್ನಾಟಕ ಸಂಘಟತೆ ತಾಲೂಕು ಅದ್ಯಕ್ಷ ಅಹ್ಮದ್ ಅಲಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅಗಸ್ಟ್–25 ರಿಂದ ಸೆ.15 ರವರೆಗೆ ಸೈಬರ್ ಅಪಾಯದ ಬಗ್ಗೆ ಯುವ ಪೀಳಿಗೆಯಲ್ಲಿ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಅಭಿಯಾನ ಆರಂಭಿಸಲಾಗಿದೆ. ಇದರ ಭಾಗವಾಗಿ ತಾಲೂಕಿನಲ್ಲಿ ಇಂದಿನಿಂದ ಬೀದಿ ನಾಟಕಗಳು, ಜಾಗೃತಿ ಭಾಷಣಗಳು, ಪೋಸ್ಟರ್‌ಗಳ ಮೂಲಕ ಸನ್ನಡತೆಯತ್ತ ತರಲು ಯತ್ನಿಸಲಾಗುವುದು. ಯುವಕರು ಡಿಜಿಟಲ್ ವ್ಯಸನದಿಂದ ಮುಕ್ತರಾಗಲು ಇದೊಂದು ಅವಕಾಶ. ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸೈಬರ್ ಅಪರಾಧಗಳ ತಡೆಗೆ ಇದೊಂದು ಪೂರಕ ಅಸ್ತ್ರವಾಗಲಿದೆ. ಎಂದರು.

ಈ ಸಂದರ್ಭದಲ್ಲಿ ಸಂಘಟನೆ ಮುಖಂಡರಾದ ಸೈಯದ್ ಅಬುಸ ಯೀದ್, ಅಬ್ದುಲ್ ಸಲಾಂ, ಎಸ್‌ಎ ನವಾಬ್, ಬಾಬಾ ಕೆಬಿಎನ್, ಶೇಖ್ ಖಾಜಾ, ರಾಜಮಹ್ಮದ್ ಸೇರಿ ಇತರರು ಇದ್ದರು.

## ಗಣೇಶ ಮೂರ್ತಿಯನ್ನು ಭಜನೆ ಮೂಲಕ ಶಾಸ್ತ್ರೋಕ್ತವಾಗಿ ವಿಸರ್ಜನೆ ಮಾಡುವ ಮೂಲಕ ಮಾದರಿಯಾದ ಯುವಕರು

ಯುವ ಮಾರ್ಗ ಸುದ್ದಿ



**ಮಾನ್ವಿ,ಸೆ.01–**ಪಟ್ಟಣದ ಧ್ಯಾನ ಮಂದಿರದಲ್ಲಿ ಜಯನಗರ ಶ್ರೀ ಬಸವೇಶ್ವರ ಯುವಕ ಸಂಘದ ಸದಸ್ಯರು ಕಳೆದ ಮೂರು ದಿನಗ ಳಿಂದ ವಿಘ್ನನಿವಾರಕನಾದ ವಿನಾಯಕನ ನ್ನು ಭಕ್ತಿ ಭಾವದಿಂದ ಪೂಜಿಸಿ ನಂತರ ಮೂರನೆಯ ದಿನದ ವಿಸರ್ಜನೆ ವೇಳೆ ಗಣೇಶ ಮೂರ್ತಿಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ಮೋಸರಿನ ಬುತ್ತಿಯನ್ನು ಕಟ್ಟಿ ವಿವಿಧ ಭಜನಾ ತಂಡಗಳಿಂದ ಗಣೇಶ ಸೇರಿದಂತೆ ಭಕ್ತಿಗೀ ತೆಗಳನ್ನು ,ಭಜನೆ ಪದಗಳನ್ನು ಹಾಗು ಗಣೇಶನ ಕುರಿತು ಒಡಪುಗಳನ್ನು ಹೇಳುತ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವ ಣಿಗೆ ಮೂಲ ಕ ಪಟ್ಟಣದ ಹಿರೇ ಬಾವಿಯಲ್ಲಿ ಗಣೇಶನ ವಿಸರ್ಜನೆ ಮಾಡಲಾಯಿತು.

ಇಂದಿನ ದಿನಗಳಲ್ಲಿ ಗಣೇಶನ ವಿಸರ್ಜನೆ ವೇಳೆ ಯುವಕರ ಗುಂಪು ಕರ್ಕಶವಾಗಿ .ಡಿಜೆ ಸದ್ದಿನೊಂದಿಗೆ ಮದ್ಯದ ಅಮಲಿನಲ್ಲಿ ಆಶ್ಲಿಲಾ ಹಾಡುಗಳಿಗೆ ನೃತ್ಯಮಾಡುತ್ತ ಸಾರ್ವಜನಿಕರಿಗೆ ಕಿರಿಕಿರಿ ಮಾಡುತ್ತಿರುವ ಸಮಯದಲ್ಲಿ ಶ್ರೀ ಬಸವೇಶ್ವರ ಯುವಕ ಸಂಘದ ಯುವ ಸದಸ್ಯರು ಮಾದರಿ ನಡೆ ಎಲ್ಲಾರ ಮೆಚ್ಚುಗೆ ಪಡೆದಿದೆ

## ಮೊದಲನೇಯ ಪುಟದಿಂದ

### ಪಾಕ್ ವಿರುದ್ಧ ಮೋದಿ ಗುಡುಗು

ಪ್ರಧಾನಿ ನರೇಂದ್ರ ಮೋದಿ, ಪಾಕಿಸ್ತಾನ ಪ್ರಧಾನಿ ಶಹಬಾದ್ ಷರೀಫ್ ಭಾಗಿಯಾಗಿದ್ದ ವೇದಿಕೆಯಲ್ಲಿಯೇ ಭಯೋತ್ಪಾದನೆಯನ್ನು ಬೆಂಬಲಿಸುತ್ತಿರುವ ದೇಶಗಳಿಗೆ ಕಠಿಣ ಸಂದೇಶ ರವಾನಿಸಬೇಕಾಗಿದೆ ಎಂದಿದ್ದಾರೆ.

ಜಮ್ಮು ಕಾಶ್ಮೀರದ "ಪಹಲ್ಗಾಮ್‌ನಲ್ಲಿ ಭಯೋತ್ಪಾದನೆಯ ಕೆಟ್ಟ ಮುಖವನ್ನು ನೋಡಿದ್ದೇವೆ" ಕೆಲವು ದೇಶಗಳು ಭಯೋತ್ಪಾದಕರಿಗೆ ಬಹಿರಂಗ ಬೆಂಬಲ ನೀಡುತ್ತಿವೆ ಎಂದು ಪಾಕಿಸ್ತಾನದ ಹೆಸರು ಉಲ್ಲೇಖಿಸದೆ ತರಾಟೆಗೆ ತೆಗೆದುಕೊಂಡ ಅವರು ಭಯೋತ್ಪಾದನೆಯ ಬಗ್ಗೆ ಜಾಗತಿಕ ಮೌನ ಪ್ರಶ್ನಾರ್ಹ ಎಂದಿದ್ದಾರೆ.

ಕಳೆದ ಏಪ್ರಿಲ್ 22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಜೀವಗಳನ್ನು ಬಲಿ ಪಡೆದ ಭಯೋತ್ಪಾದಕ ದಾಳಿ ಅತ್ಯಂತ ಖಂಡನೀಯ. "ಕೆಲವು ದೇಶಗಳು ಭಯೋತ್ಪಾದನೆಗೆ ಮುಕ್ತ ಬೆಂಬಲ ನೀಡುತ್ತಿವೆ, ಅಂತಹ ದೇಶಗಳನ್ನು ಸ್ವೀಕರಿಸಲು ಸಾಧ್ಯವೆ ಎಂದು ಪ್ರಶ್ನಿಸಿದ್ದಾರೆ

ಯುರೋಪಿನಾದ್ಯಂತ ರಾಷ್ಟ್ರಗಳು ಮತ್ತು ಸರ್ಕಾರದ ಮುಖ್ಯಸ್ಥರು ಭಾಗವಹಿಸಿದ್ದ ನಾಯಕರ ಸಭೆಯು ಪ್ರಾದೇಶಿಕ ಸ್ಥಿರತೆ, ಆರ್ಥಿಕ ಸಹಕಾರ ಮತ್ತು ಬಹುಪಕ್ಷೀಯ ರಾಜತಾಂತ್ರಿಕತೆಯ ಮೇಲೆ ಗಮನ ಹರಿಸುವ ವೇದಿಕೆಯಾಗಿದ್ದರೂ ಪಾಕಿಸ್ತಾನದ ಪ್ರಧಾನಿ ಶಹಬಾದ್ ಷರೀಫ್ ಭಾಗಿಯಾಗಿದ್ದ ಹಿನ್ನೆಲೆಯಲ್ಲಿ ಭಯೋತ್ಪಾದನೆ ಮತ್ತು ಪಾಕಿಸ್ತಾನದ ವಿರುದ್ಧ ಪ್ರಧಾನಿ ಗುಡುಗಿದ್ದಾರೆ.

ಪ್ರಾದೇಶಿಕ ಶಾಂತಿ ಕಾಪಾಡುವಲ್ಲಿ ಮತ್ತು ವೇಗವಾಗಿ ಬದಲಾಗುತ್ತಿರುವ ಜಾಗತಿಕ ಭೂದೃಶ್ಯದಲ್ಲಿ ಸಮತೋಲಿತ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಶಾಂಘೈ ಸಹಕಾರ ಶೃಂಗ ಮಹತ್ವದ ಪಾತ್ರ ವಹಿಸಿದೆ ಎಂದು ಹೇಳಿದರು

ತಮ್ಮ ಆರಂಭಿಕ ಭಾಷಣದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಶಾಂಘೈ ಸಹಕಾರ ಸಂಘಟನೆಯ ಸದಸ್ಯ ರಾಷ್ಟ್ರಗಳೊಂದಿಗೆ ಸಹಕಾರ ಬಲಪಡಿಸುವ ಚೀನಾದ ಬದ್ಧತೆಯನ್ನು ಪುನರುಚ್ಚರಿಸಿ ಮತ್ತು ಜಾಗತಿಕ ನ್ಯಾಯವನ್ನು ರಕ್ಷಿಸುವಲ್ಲಿ ಒಗ್ಗಟ್ಟಿನ ನಿಲುವಿಗೆ ಕರೆ ನೀಡಿದ್ದಾರೆ

ವಿಶ್ವಸಂಸ್ಥೆಯ ಪಾತ್ರವನ್ನು ರಕ್ಷಿಸುವ, ಏಕಪಕ್ಷೀಯತೆ ವಿರೋಧಿಸುವ ಮತ್ತು ಜಾಗತಿಕ ಆರ್ಥಿಕ ಸ್ಥಿರತೆಗೆ ಅತ್ಯಗತ್ಯ.,ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ಎತ್ತಿಹಿಡಿಯುವ ಅಗತ್ಯವಿದೆ ಎಂದಿದ್ದಾರೆ

### ಧರ್ಮಸ್ಥಳದಲ್ಲಿ ಬಿಜೆಪಿ ಯಾತ್ರೆ ಡೋಂಗಿತನ

ನನಗೆ ಗೊತ್ತಿಲ್ಲ. ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿ ಇರಬಹುದು. ಆದರೆ ಈಗ ವಿಚಾರ ಇರುವುದು ಚಾಮಂಡಿಬೆಟ್ಟದ್ದಲ್ಲ ದಸರಾ ನಾಡಹಬ್ಬ ಎಲ್ಲರಿಗೂ ಸೇರಿದ್ದು ಎಂದರು.

ನನ್ನ ಸ್ವಗ್ರಾಮದಲ್ಲಿ ನಾನು 5 ರಿಂದ 7ನೇ ತರಗತಿವರೆಗೆ ಓದಿದ ಶಾಲೆಗೆ ಹೊಸ ಕಟ್ಟಡ ಕಟ್ಟಿಸಿದ್ದೇನೆ. ಈ ಊರಿಗ ಪ್ರಾಥಮಿಕ ಶಾಲೆ, ಹೈಸ್ಕೂಲ್, ಪಿಯು ಕಾಲೇಜು ಆಗಿದೆ. ವಿದ್ಯಾರ್ಥಿಗಳು ಸಿಗಲ್ಲ ಎಂಬ ಕಾರಣಕ್ಕೆ ಪದವಿ ಕಾಲೇಜು ಮಾಡಿಲ್ಲ. ಹಾಗೆಯೇ ಊರಿಗೆ ಆರೋಗ್ಯ ಸೇವೆ ಸಿಗಲು ಎಲ್ಲ ವ್ಯವಸ್ಥೆ ಮಾಡಿದ್ದೇನೆ. ಊರಿನ ಋಣ ಯಾವಾಗಲೂ ಇದ್ದೆ ಇರುತ್ತದೆ. ಅದು ಯಾವಾಗಲೂ ಮುಗಿಯದ ಋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಈ ಸಂದರ್ಭದಲ್ಲಿ ಸಚಿವ ವೆಂಕಟೇಶ್ ಸೇರಿದಂತೆ ಹಲವು ಗಣ್ಯರು ಇದ್ದರು.

### 25 ವರ್ಷಗಳ ಬಳಿಕ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನ ಮತ್ತು ಶಾಲೆಗೆ ದೇಣಿಗೆ

ಉದ್ಯಮಿ ರವಿಕುಮಾರ್ ಹರವಿ ಮಹೇಂದ್ರಕುಮಾರ್ ಇನ್ನೂ ಹಲವರ ಪ್ರಯತ್ನದಿಂದಾಗಿ ನಡೆದ ಸ್ನೇಹ ಸಮ್ಮಿಲನದಲ್ಲಿ ರಾಯಚೂರು ,ಬೆಂಗಳೂರು, ತುಮಕೂರು ,ಹೈದ್ರಾಬಾದ, ಆಂಧ್ರದ ಕಡಪ ಸೇರಿದಂತೆ ಬೇರೆ ಬೇರೆ ಭಾಗಗಳಲ್ಲಿ ಇದ್ದಂತಹ ಹಳೆಯ ವಿದ್ಯಾರ್ಥಿಗಳು ಸ್ನೇಹ ಸಮ್ಮಿಲನದಲ್ಲಿದ್ದರು.

ಶಾಲೆಯ ಆ ಕಾಲದ ಈ ವಿದ್ಯಾರ್ಥಿಗಳ ಬ್ಯಾಚಿನಲ್ಲಿ ಸೇನೆಯಲ್ಲಿ, ವೈದ್ಯಕೀಯ ಕ್ಷೇತ್ರ ,ಶಿಕ್ಷಣ ಕಾನೂನು ಕ್ಷೇತ್ರದಲ್ಲಿ, ಪೊಲೀಸ್ ಇಲಾಖೆಯಲ್ಲಿ, ವಾಣಿಜ್ಯ ಹಾಗೂ ಉದ್ಯಮ ಕ್ಷೇತ್ರದಲ್ಲಿ ಇದ್ದವರೂ ಇದ್ದರು. ಈ ವೇಳೆ ಹಲವರು ತಮ್ಮ ಪರಿಚಯ ಮಾಡಿಕೊಳ್ಳುತ್ತಾ ಶಾಲೆಯಲ್ಲಿ ತಾವು ಕಲಿಯುವಾಗ ಇದ್ದಂತಹ ಶಾಲಾ ಗುರುಗಳನ್ನು ನೆನೆದರು. ಶಾಲೆಯಲ್ಲಿ ಆ ದಿನಗಳಲ್ಲಿ ಆಡಿದ ತುಂಟಾಟಗಳನ್ನು ನೆನೆದರು. ಪರಸ್ಪರ ಒಬ್ಬರಿಗೊಬ್ಬರು ಕುಶಲೋಪರಿಗೈದರು.

ನಂತರ ನೀವೃತ್ತ ತರಗತಿ ಶಿಕ್ಷಕರು ಯಲ್ಲಪ್ಪ ನಿಲೋಗಲ್,ಸಣ್ಣಹಂಪಮ್ಮ ,ಮಂಜುನಾಥ ಕಮತಾರ, ಶಾಂತಯ್ಯ, ಶರಣಪ್ಪ, ಪ್ರಭಯ್ಯ ಸ್ವಾಮಿ, ಎಮ್.ಎಮ್ ಹಿರೇಮಠ, ಕೆ.ಇ.ನರಸಿಂಹ, ಕೆಮಿಯ್ಯ ನಾಯ್ಕ್ ದೈಹಿಕ ಶಿಕ್ಷಕರು, ಜಯಶ್ರೀ ಶಿಕ್ಷಕರು ಮತ್ತು ಪರಿಚಾರಕ ಬಸವರಾಜ್ ಅವರಿಗೆ ಸನ್ಮಾನಿಸಿ ಗೌರವಿಸಿದರು. ಈ ಸ್ನೇಹ ಸಮ್ಮೇಲನ ಕಾರ್ಯಕ್ರಮದಲ್ಲಿ ಶಾಲೆಗೆ ನೆನಪಿನ ಕಾಣಿಕೆಯಾಗಿ ಗ್ರಂಥಾಲಯಕ್ಕೆ ಪುಸ್ತಕಗಳನ್ನ ಹಾಗೂ ಹತ್ತು ಚೇರ್‌ಗಳು ಮತ್ತು ಸ್ಕೂಲ್ ಬೋರ್ಡ್ಗಳನ್ನ ಹಳೆಯ ವಿದ್ಯಾರ್ಥಿಗಳು ದೇಣಿಗೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ದಶವಂತ, ಕೆ.ರಾಜಶೇಖರ್ ಯಾದವ್ ಪ್ರಥಮ ದರ್ಜೆ ಗುತ್ತೇದಾರರು, ಶರಣುಸ್ವಾಮಿ, ಸಂತೋಷ ಕುಮಾರ್ ,ಆನಂದ ಕುಮಾರ್ ವಕೀಲರು ಬೆಂಗಳೂರು, ಡಾ.ಸಕಲೇಶ್ ಪಾಟೀಲ್ ಬೆಟ್ಟದೂರು, ಚಂದ್ರಮೌಳಿ ಬೆಟ್ಟದೂರು, ವೀರಭದ್ರ ಗೌಡ, ರವಿ ಕುಮಾರ್ ಸಾಹುಕಾರ, ಶಿಲ್ಪ, ಶಾಂತಲ, ಸುವರ್ಣ, ಜೋಗೇಂದ್ರ ಕುಮಾರ್,ಮಹೇಂದ್ರ ಕುಮಾರ್,ಸುರೇಶ್ ಯೋದರು,ಅಮರೇಶ್ ಶೆಟ್ಟಿ,ಮಹಾಬಳೇಶ್ ಪೋತ್ನಾಳ ಮಂಜುನಾಥ ಸಾವುಜಿ ಸೇರಿದಂತೆ ಇನ್ನೂ ಅನೇಕರು ಇದ್ದರು.

### ಸಾರಿಗೆ ಸಿಬ್ಬಂದಿಗಳಿಗೆ ಡೆಂಗ್ಯೂ ಜಾಗೃತಿ

ವಿಪರೀತ ಜ್ವರ, ತೀವ್ರ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ನಡುಕ, ಚರ್ಮದಿಂದ ರಕ್ತಸ್ರಾವ ಆಗುವಿಕೆ ಇದರ ಸಾಮಾನ್ಯ ಲಕ್ಷಣಗಳಾಗಿವೆ. ಸೊಳ್ಳೆವಾಹಕ ರೋಗಗಳ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಗುಣಮುಖರಾಗಬಹುದು. ಎಂದು ಸಾಂಕ್ರಾಮಿಕ ರೋಗ ತಜ್ಞ ಅಶೋಕ ಮಡ್ಡಿಕರ್ ಹೇಳಿದರು. ಘಟಕ ವ್ಯವಸ್ಥಾಪಕ ಪ್ರಕಾಶ ದೊಡ್ಡಮನಿ ಸೇರಿ ಸಾರಿಗೆ, ಆರೋಗ್ಯ ಇಲಾಖೆ ಸಿಬ್ಬಂಧಿಗಳು ಇದ್ದರು.

### ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್, ಇಸ್ರೇಲ್ ಪ್ರಧಾನಮಂತ್ರಿ ನೆತನ್ಯಾಹು ಪ್ರತಿಕೃತಿ ದಹನ

**ಕಲಬುರಗಿ,ಸೆ.1–**ಇಸ್ರೇಲ್ ದೇಶವು ಗಾಜಾಪಟ್ಟಿಯಲ್ಲಿ ಪ್ಯಾಲೇಸ್ತಿನಿಯರ ನರಮೇಧ ಮಾಡುತ್ತಿರುವುದನ್ನು ಖಂಡಿಸಿ ಮತ್ತು ಭಾರತದ ಮೇಲೆ ಶೇ.50 ರಷ್ಟು ಸುಂಕ ಹೇರಿರುವ ಅಮೆರಿಕಾದ ಸಾಮ್ರಾಜ್ಯಶಾಹಿ ನೀತಿಯನ್ನು ವಿರೋಧಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದ ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಭಾರತದ ಮೇಲೆ ಶೇ.50 ರಷ್ಟು ಸುಂಕ ಹೇರಿರುವ ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರ ಸಾಮ್ರಾಜ್ಯ ಶಾಹಿ ನೀತಿಯನ್ನು ವಿರೋಧಿಸಿ ಮತ್ತು ಇಸ್ರೇಲ್ ದೇಶವು ಗಾಜಾಪಟ್ಟಿಯಲ್ಲಿ ಪ್ಯಾಲೇಸ್ತಿನಿಯರ ನರಮೇಧ ಮಾಡುತ್ತಿರುವುದನ್ನು ಖಂಡಿಸಿ ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು ಅವರ ಪ್ರತಿಕೃತಿ ದಹಿಸಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.




ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಸಜ್ಜನ್, ಗೌರಮ್ಮ ಪಾಟೀಲ, ಖಜಾಂಚಿ ನಾಗಯ್ಯ ಸ್ವಾಮಿ, ಜಾವಿದ್ ಹುಸೇನ್, ಅಲ್ತಾಫ್ ಇನಾಮದಾರ, ಮಹಮೂದ್, ಕಲ್ಯಾಣ ಸಿಂಗೆ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಚಾಂಪಿಯನ್ಸ್



ಮಾನ್ವಿ,ಸೆ.01–ಪಟ್ಟಣದ ತಾಲೂಕ ಕ್ರೀಡಾಂಗಣದಲ್ಲಿ ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘ ವತಿಯಿಂದ ನಡೆದ ತಾಲೂಕ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಟ್ಟಣದ ಸರ್ವೋದಯ ಕಾಲೇಜಿನ ಉಪನ್ಯಾಸಕ ತಂಡ ಚಾಂಪಿಯನ್ ಆಗಿ ಹೊರ ಹೊಮ್ಮಿತು.

### ಜಿಲ್ಲಾಡಳಿತ, ವಿವಿಧ ಇಲಾಖೆಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಉಪ ಲೋಕಾಯುಕ್ತರು



ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.01–**ರಾಯಚೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಗಳು ಉತ್ತಮ ಕಾರ್ಯ ಮಾಡಿದ್ದರಿಂದಾಗಿ ರಾಯಚೂರ ಜಿಲ್ಲೆಯ ತಮ್ಮ ಪ್ರವಾಸ ಕಾರ್ಯಕ್ರಮವು ಯಶಸ್ವಿಯಾಗಿ ನಡೆದು ಸಂಪನ್ನಗೊಂಡಿದೆ ಎಂದು ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ತಿಳಿಸಿದರು.

ಆಗಸ್ಟ್ 30 ರಂದು ಸಂಜೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಸಾರ್ವಜನಿಕರ ಅಹವಾಲು ಲೋಕಾಯುಕ್ತರ ಬಳಿಗೆ ಹೋಗಬೇಕು. ಜನತೆಗೆ ನ್ಯಾಯ ಸಿಗಬೇಕು ಎಂದು ಯೋಜಿಸಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ, ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕುಮಾರ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ರಾಯಚೂರ ಲೋಕಾಯುಕ್ತ ಎಸ್ಪಿ ಸತೀಶ್ ಚಿಟಗುಬ್ಬಿ, ಡಿಎಸ್ಪಿ ರವಿ ಪುರುಷೋತ್ತಮ, ವಸಂತಕುಮಾರ, ರಾಯಚೂರು ತಹಸೀಲ್ದಾರ ಸುರೇಶ ವರ್ಮಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉತ್ತಮ ಕಾರ್ಯಕೈಗೊಂಡು, ಕಾರ್ಯಕ್ರಮದ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ಸಿದ್ಧತೆ ಮಾಡಿದ್ದಾರೆ. ಹಲವಾರು ಬಾರಿ ಪೂರ್ವಭಾವಿ ಸಿದ್ಧತಾ ಸಭೆ ನಡೆಸಿದ್ದಾರೆ. ಪ್ರವಾಸ ಕಾರ್ಯಕ್ರಮದ ಬಗ್ಗೆ ಶಿಸ್ತುಬದ್ಧವಾದ ಪ್ರಚಾರ ನಡೆಸಿದ್ದಾರೆ. ರಾಯಚೂರ ನಗರದ ಜನಸಂದಣಿಯ ಎಲ್ಲ ಸ್ಥಳಗಳಲ್ಲಿ ನನ್ನ ಪ್ರವಾಸ ಕಾರ್ಯಕ್ರಮದ, ಅಹವಾಲು ಸ್ವೀಕಾರ ಮಾಹಿತಿಯ ದೊಡ್ಡ ದೊಡ್ಡ ಫಲಕಗಳು ಕಾಣಿಸಿದ್ದೇ ಇದಕ್ಕೆ ಸಾಕ್ಷಿಯಾಗಿದೆ. ಇದರಿಂದಾಗಿ ಕೃಷಿ ವಿಶ್ವವಿದ್ಯಾಲಯದ ಆವರಣಕ್ಕೆ ಎರಡನೇ ದಿನ ಆಗಸ್ಟ್ 29ರಂದು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿ ತಮ್ಮ ದೂರು ಅರ್ಜಿ ಸಲ್ಲಿಸಿದರು. ಮೊದಲ ದಿನ ಬೆಳಗ್ಗೆಯಿಂದ ಸಂಜೆವರೆಗೆ 500ಕ್ಕೂ ಹೆಚ್ಚು ಟೋಕನ್ ನೀಡಿ ಬೆಳಗ್ಗೆಯಿಂದ ಸಂಜೆವರೆಗೆ ದೂರುಗಳ ಬಗ್ಗೆ ವಿಚಾರಣೆ ನಡೆಸಿ ಜನತೆಗೆ ನ್ಯಾಯ ಒದಗಿಸಿಕೊಡಲಾಗಿದೆ. ಹೊಸ ಅರ್ಜಿಗಳ ವಿಚಾರಣೆಗೆ ಸಂಬಂಧಿಸಿದಂತೆ ಮೊದಲ ದಿನ ಉಳಿದ ಬಾಕಿ ಅರ್ಜಿಗಳಿಗೆ ನಿಯಮನುಸಾರ ಕ್ರಮ ವಹಿಸಲಾಗುವುದು ಎಂದು ಜನತೆಗೆ ತಿಳಿಸಲಾಗಿದೆ.

ಕೊನೆಯ ದಿನ ಆಗಸ್ಟ್ 30ರಂದು ಬಾಕಿ ಅರ್ಜಿಗಳ ವಿಚಾರಣೆ ನಡೆಯುವಾಗಲು ಸಹ ಸಾಕಷ್ಟು ಸಾರ್ವಜನಿಕರು ದೂರು ಅರ್ಜಿಗಳೊಂದಿಗೆ ಸಭಾಂಗಣಕ್ಕೆ ಆಗಮಿಸಿ ಅರ್ಜಿ ಸ್ವೀಕರಿಸಿ ಎಂದು ಸರದಿ ಸಾಲಲಿ ನಿಂತಿದ್ದರು. ಕೊನೆಯ ದಿನ ನಿವೇಶನ ಹಕ್ಕು ಪತ್ರ ಹಿಡಿದು ಆಗಮಿಸಿದ ದೇವದುರ್ಗ ತಾಲೂಕಿನ ಮಹಿಳೆಯರಿಗೆ ಸ್ಪಂದಿಸಿ ದೂರನ್ನು ಸ್ವೀಕರಿಸಲಾಗಿದೆ. ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಕೊನೆಯ ದಿನವೂ ಬಂದ ಅರ್ಜಿಗಳನ್ನು ನೋಂದಣಿ ಮಾಡಿ ಸಾರ್ವಜನಿಕರಿಗೆ ಸ್ಪಂದನೆ ನೀಡಲಾಗಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ ಸೇರಿದಂತೆ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಸಮನ್ವಯ ಸಾಧಿಸಿ ಕಾರ್ಯಕ್ರಮಕ್ಕೆ ಶಿಸ್ತುಬದ್ಧ ಪ್ರಚಾರ ನೀಡಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಕಾರ್ಯಕ್ರಮಕ್ಕೆ ಆಗಮಿಸಲು ಸಾಧ್ಯವಾಗಿದೆ. ಮತ್ತು ಆಗಮಿಸಿದ ಜನತೆಗೆ ಸ್ಪಂದನೆ ಮಾಡಲು ನಮಗೆ ಸಾಧ್ಯವಾಯಿತು ಎಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮಹಾನಗರ ಪಾಲಿಕೆಯ ಆಯುಕ್ತರು, ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು, ತಹಸೀಲ್ದಾರರು ಮತ್ತು ಇನ್ನಿತರ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯಕ್ಕೆ ಉಪ ಲೋಕಾಯುಕ್ತರು ಮೆಚ್ಚುಗೆ ವ್ಯಕ್ತಪಡಿಸಿದರು.

### ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ 2ನೇ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನ

**ರಾಯಚೂರು,ಸೆ.01–**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಯಚೂರು ತಾಲೂಕು ಶಿಶು ಅಭಿವೃದ್ಧಿ ಯೋಜನೆಯಡಿ ಗಿಲ್ಲೇಸೂಗೂರು ವ್ಯಾಪ್ತಿಯಲ್ಲಿ 2024–25ನೇ ಸಾಲಿಗೆ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರಂತೆ ಈ ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ದಿನಾಂಕ 13.02.2025ರಂದು ಸಭೆ ನಡೆಸಿ ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗಿದೆ. ಅದರಲ್ಲಿ ಕೆಲವು ಅಂಗನವಾಡಿ ಕೇಂದ್ರಗಳಿಗೆ ಎರಡು ಕಡೆ ಒಬ್ಬರೆ ಅಭ್ಯರ್ಥಿಯು ಆಯ್ಕೆಯಾಗಿದ್ದು, ಅವರು ಕೋರಿರುವ ಅಂಗನವಾಡಿ ಕೇಂದ್ರವನ್ನು ಆಯ್ಕೆ ಮಾಡಿಕೊಂಡು ಕರ್ತವ್ಯಕ್ಕೆ ಹಾಜರಾಗಲು ಜಿಲ್ಲಾ ಸಮಿತಿಯಿಂದ ತೀರ್ಮಾನಿಸಲಾಗಿದೆ ಮತ್ತು ಅವಕಾಶ ನೀಡಲಾಗಿರುತ್ತದೆ. ಅದರಂತೆ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಇನ್ನೊಂದು ಕೇಂದ್ರಕ್ಕೆ 2ನೇ ಆದ್ಯತೆ ಇರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನ ಪ್ರಕಟಿಸಿದ್ದು, ಇದಕ್ಕೆ ಆಕ್ಷೇಪಣೆ ಅರ್ಜಿಗಳನ್ನ ಸೂಕ್ತ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 03ರ ಸಂಜೆ 5.30ರವರೆಗೆ ಸಲ್ಲಿಸಬಹುದಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಗಿಲ್ಲೇಸೂಗೂರು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಆಕ್ಷೇಪಣೆ ಸಲ್ಲಿಸುವವರು ಆಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳನ್ನ ಸಲ್ಲಿಸದಿದ್ದಲ್ಲಿ ಅಂತಹವರ ಆಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

2ನೇ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳು: ಕಾಡ್ಲೂರ ಕೇಂದ್ರ–2ಕ್ಕೆ ಪರ್ವಿನ್ ಗಂಡ ದೌಲಸಾಬ್, ಎಲ್.ಕೆ.ದೊಡ್ಡಿ ಅಂಗನವಾಡಿ ಕೇಂದ್ರ–3ಕ್ಕೆ ರಮೇಶಮ್ಮ ಗಂಡ ಮಹೇಶ, ಸುಗಮಕುಂಟ ಗ್ರಾಪಂ ವ್ಯಾಪ್ತಿಯ ಇಬ್ರಾಹಿಂದೊಡ್ಡಿ ಅಂಗನವಾಡಿ ಕೇಂದ್ರ–3ಕ್ಕೆ ಜಯಶ್ರೀ ಗಂಡ ನರಸಿಂಹಲು, ಬಿಜನಗೇರಾ ಅಂಗನವಾಡಿ ಕೇಂದ್ರ–3ಕ್ಕೆ ವನೀತಾ ಗಂಡ ಜಂಬಣ್ಣ, ಚಂದ್ರಬಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಲೇಟ್ಕೂರು ಅಂಗನವಾಡಿ ಕೇಂದ್ರ–3ಕ್ಕೆ ಮಹಾದೇವಿ ಗಂಡ ಮಾರೆಪ್ಪ, ಗಾಣದಾಳ ಅಂಗನವಾಡಿ ಕೇಂದ್ರ–1ಕ್ಕೆ ಭೂಲಕ್ಷ್ಮಿ ??ೀ ಗಂಡ ಪ್ರಾಣೇಶ, ಮಾಟಮಾರಿ ಅಂಗನವಾಡಿ ಕೇಂದ್ರ–4ಕ್ಕೆ ಗಂಗಮ್ಮ ಗಂಡ ನರಸಿಂಹ, ರಾಯಚೂರು ನಗರಸಭೆ ವ್ಯಾಪ್ತಿಯ ಯರಮರಸ್ ದಂಡು ಅಂಗನವಾಡಿ ಕೇಂದ್ರ–2ಕ್ಕೆ ವಿಜಯಲಕ್ಷ್ಮಿ ??ೀ ಗಂಡ ಆಂಜನೇಯ್ಯ ಇವರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಲಾಗಿದ್ದು, ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ಸೆಪ್ಟೆಂಬರ್ 3ರಸಂಜೆ 5.30ರೊಳಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಗಿಲ್ಲೇಸೂಗೂರು ಅವರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಗಿಲ್ಲೇಸೂಗೂರು ಅವರನ್ನು ಸಂಪರ್ಕಿಸುವಂತೆ ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾದನ ಹಿಪ್ಪರ್ಗಾ: ಪತ್ತಿನ ಸಂಘದ ಚುನಾವಣೆ ಗುತ್ತೇದಾರ ಬೆಂಬಲಿಗರು ಜಯಭೇರಿ



**ಆಳಂದ,ಸೆ.01–**ತಾಲೂಕಿನ ಮಾದನ ಹಿಪ್ಪರ್ಗಾ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿ ಮೇಲುಗೈ ಸಾಧಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಅಣ್ಣಾರಾಯ ಸಿದ್ದಣ್ಣಾ ಪಾಟೀಲ, ಭೀಮಶ್ಯಾ ಹಣಮಂತಪ್ಪ ಅಂಜುಟಗಿ, ಗುರುನಾಥ ಹಣಮಂತ ಕೋಲಶೆಟ್ಟಿ, ಸಾಮಾನ್ಯ ಮಹಿಳಾ ಕ್ಷೇತ್ರದಿಂದ ನಾಗಮ್ಮ ಮಹಾರುದ್ರಪ್ಪ ಮಡಿವಾಳ, ಮಧುರಾಬಾಯಿ ಶಂಕರ ದುದ್ಧಗಿ, ಸಾಲಗಾರರ ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಧರ್ಮಣ್ಣಾ ಸೀತಾರಾಮ ಜಮಾದಾರ, ಸಾಲಗಾರರ ಹಿಂದುಳಿದ ವರ್ಗ ಅ ಕ್ಷೇತ್ರದಿಂದ ಕಲ್ಯಾಣಪ್ಪ ಗುರುಬಸಪ್ಪ ಗುಳಗಿ, ಸಾಲಗಾರರ ಹಿಂದುಳಿದ ವರ್ಗ ಬ ಕ್ಷೇತ್ರದಿಂದ ಶಿವಶಾಂತ ಮಾಣಿಕರಾವ ಕುಲಕರ್ಣಿ ಅವರು ಚುನಾವಣೆಯಲ್ಲಿ ಬಹುಮತ ಪಡೆದು ಮಾಜಿ ಶಾಸಕ ಗುತ್ತೇದಾರ ಬೆಂಬಲಿಗರ ಪಡೆಯಿಂದ ಆಯ್ಕೆಯಾಗಿದ್ದಾರೆ.

ರವಿವಾರ ನಡೆದ 12 ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ 9 ಜನ ನಿರ್ದೇಶಕರು ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ ಬೆಂಬಲಿಗರು ಗೆಲುವಿನ ನಗೆ ಬೀರಿದರು. ಗೆಲುವಿನ ನಂತರ ಅಭ್ಯರ್ಥಿಗಳು, ಬೆಂಬಲಿಗರು ಮತ್ತು ಮುಖಂಡರು ವಿಜಯೋತ್ಸವ ಆಚರಿಸಿದರು.

ಗೆಲುವಿಗೆ ಕಾರಣರಾದ ಕೃಷಿ ಪತ್ತಿನ ಸಹಕಾರ ಸಂಘದ ಎಲ್ಲ ಸದಸ್ಯರಿಗೆ, ಕಾರ್ಯಕರ್ತರಿಗೆ, ಮುಖಂಡರಿಗೆ ಮಾಜಿ ಶಾಸಕ ಸುಭಾಷ್ ಆರ್ ಗುತ್ತೇದಾರ, ಜಿ.ಪಂ ಮಾಜಿ ಉಪಾಧ್ಯಕ್ಷ ಹರ್ಷಾ ಎಸ್ ಗುತ್ತೇದಾರ ಧನ್ಯವಾದ ಸಲ್ಲಿಸಿದ್ದಾರೆ.

ಮುಂದಿನ ದಿನಗಳಲ್ಲಿ ನೂತನ ನಿರ್ದೇಶಕರು ರೈತರ ಏಳಿಗೆಯ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡಿ ಸಂಘವನ್ನು ಎತ್ತರಕ್ಕೆ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದ್ದಾರೆ.

# ದಿನಪತ್ರಿಕೆಯಲ್ಲಿ ತಪ್ಪು ವರದಿಗೆ ಕ್ಷಮೆ ಕೇಳಿ 1 ಲಕ್ಷ ದಂಡ ತೆತ್ತ ಸಂಪಾದಕ : ಎಂ.ವೀರನಗೌಡ ವಕೀಲ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.01–** ವಿಶ್ವವಾಣಿ ಕನ್ನಡ ದಿನಪತ್ರಿಕೆಯ ಸಂಪಾದಕ ವಿಶ್ವೇಶ್ವರಭಟ್ ಅವರು ತಮ್ಮ ಪತ್ರಿಕೆಯಲ್ಲಿ ನಿಕಟಪೂರ್ವ ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಬಸವಪ್ರಭುಪಾಟೀಲರ ವಿರುದ್ಧ ಸುಳ್ಳು ಸುದ್ದಿ ಪ್ರಕಟಿಸಿದ್ದರಿಂದ ಈ ಕುರಿತು ಡಾ.ಬಸವಪ್ರಭುಪಾಟೀಲ ಅವರು ನ್ಯಾಯಾಲಯದಲ್ಲಿ ಮಾನಹಾನಿ ಮೊಕದ್ದಮೆಯನ್ನು ದಾಖಲಿಸಿದ್ದರು. ಈ ದಾವೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿದ ಸೂಚನೆ ಅನ್ವಯ ವಿಶ್ವೇಶ್ವರಭಟ್ ಅವರು ಕ್ಷಮೆಯಾಚಿಸಿ 1 ಲಕ್ಷ ದಂಡವನ್ನು ಪಾವತಿಸಿದ್ದಾರೆ ಎಂದು ಡಾ.ಬಸವಪ್ರಭುಪಾಟೀಲರ ಪರ ವಕೀಲ ಎಂ.ವೀರನಗೌಡ ಪೋತ್ನಾಳ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ವಿಶ್ವವಾಣಿ ದಿನಪತ್ರಿಕೆಯಲ್ಲಿ "ಜಿಲ್ಲಾ ಕಸಾಪ ಸಮ್ಮೇಳನ ಕುಟುಂಬಕ್ಕೆ ಮೀಸಲಾಗಿದೆಯೇ" "ಸುಲಿಗೆಗೆ ನಿಂತಿದೆ ಕನ್ನಡ ಸಾಹಿತ್ಯ ಪರಿಷತ್" ಎಂದು ವರದಿಗಾರ ಆನಂದಸ್ವಾಮಿ ಹಿರೇಮಠ ರವರು ಸುದ್ದಿ ಪ್ರಕಟಿಸಿದ್ದರು ಇದಕ್ಕೆ ರಾಯಚೂರಿನ ಕರವೇ ಅಧ್ಯಕ್ಷ ಅಶೋಕ್ ಜೈನ್ ರವರು ಧ್ವನಿಗೂಡಿಸಿದ್ದರು. ಆದರೆ ಪೋತ್ನಾಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಯಾವುದೇ ರೀತಿಯ ದೇಣಿಗೆಯನ್ನು ಸಾಹಿತ್ಯ ಪರಿಷತ್ ಪಡೆದಿಲ್ಲಾ ಆದಾಗ್ಯೂ ಸುಳ್ಳು ಸುದ್ದಿಯನ್ನು ಪ್ರಕಟಿಸಲಾಗಿತ್ತು. ಇದರಿಂದ ತೀವ್ರ ಮನನೊಂದ ಡಾ.ಬಸವಪ್ರಭು ಪಾಟೀಲ್ ರವರು ಮಾನಹಾನಿಯ ಬಗ್ಗೆ ಪ್ರಕರಣವನ್ನು ದಾಖಲಿಸುವಂತೆ ಎಂ.ವೀರನಗೌಡ ವಕೀಲರಲ್ಲಿ ಮನವಿ ಮಾಡಿದಾಗ ಅವರು ಹಿರಿಯ ವಕೀಲ ಸಿಂಧನೂರಿನ ವಿರುಪಾಕ್ಷಪ್ಪ ಮಾಲೀಪಾಟೀಲರ ಮಾರ್ಗದರ್ಶನದಲ್ಲಿ ಮಾನ್ವಿ ಪೋಲೀಸ್ ಠಾಣೆಗೆ ದೂರು ದಾಖಲಿಸಿದರು. ನಂತರ ಮಾನವಿ ನ್ಯಾಯಾಲಯದಲ್ಲಿ ಖಾಸಗಿ ಫಿರ್ಯಾಧಿ ಸಂಖ್ಯೆ 12/2018 ದಾಖಲಿಸಿದಾಗ ಆಗ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಭೀಮನಗೌಡ ಇಟಗಿ ಗೌರವಾಧ್ಯಕ್ಷರು ಮತ್ತು ಆರ್.ಸೂಗರಡ್ಡಿ ಹಿರೇಕೊಟ್ನೆಕಲ್ ವಲಯ ಅಧ್ಯಕ್ಷರು ಇವರು ತಮ್ಮ ಸಾಕ್ಷವನ್ನು ನುಡಿದಾಗ ಪ್ರಕರಣವನ್ನು ದಾಖಲಿಸಿಕೊಂಡ ನ್ಯಾಯಾಲಯವು ಆರೋಪಿತರನ್ನಾಗಿ ವಿಶ್ವೇಶ್ವರ ಭಟ್, ಆನಂದಸ್ವಾಮಿ ಹಿರೇಮಠ, ಅಶೋಕ್ ಜೈನ್ ರಾಯಚೂರುರವರಿಗೆ ನ್ಯಾಯಾಯಲಕ್ಕೆ ಹಾಜರಾಗುವಂತೆ ಆದೇಶ ನೀಡಲಾಯಿತು. ಆನಂದಸ್ವಾಮಿ ಮತ್ತು ಅಶೋಕ್ ಜೈನ್ ರವರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡರು. ಆದರೆ ವಿಶ್ವೇಶ್ವರ ಭಟ್ ನ್ಯಾಯಾಲಯಕ್ಕೆ ಹಾಜರಾಗಲಿಲ್ಲಾ ಕೊನೆಗೆ ನ್ಯಾಯಾಲಯವು ಅವರ ಆಸ್ತಿಯ ಮುಟ್ಟುಗೋಲಿಗೆ ಆದೇಶಿಸಿದಾಗ ಹೈಕೋರ್ಟ ಮೆಟ್ಟಿಲು ಏರಿ ಮಾನ್ವಿ ನ್ಯಾಯಾಲಯದ ಪ್ರಕರಣ ಸಂಖ್ಯೆ ಸಿ.ಸಿ.ನಂ.91/2020 ರದ್ದು ಪಡಿಸುವಂತೆ ಕ್ರಿಮಿನಲ್ ಅರ್ಜಿ ಸಂಖ್ಯೆ 200494/ 2024 ನ್ನು ಕಲಬುರ್ಗಿಯ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದರು. ಆದರೆ ನ್ಯಾಯಾಲಯವು ಮೊದಲು ನ್ಯಾಯಲಯಕ್ಕೆ ಗೌರವ ಕೊಡಿ ಮಾನ್ವಿ ನ್ಯಾಯಾಲಯದಲ್ಲಿ ಹಾಜರಾಗಿ ಜಾಮೀನು ಪಡೆಯಿರಿ ನಂತರ ಕಲಬುರ್ಗಿಯ ಉಚ್ಚನ್ಯಾಯಾಲಯಕ್ಕೆ ಬನ್ನಿ ಎಂದು ಹೇಳಿತು ಎಂದರು.

ವಿಶ್ವೇಶ್ವರ ಭಟ್ ರವರು ಅನ್ಯ ದಾರಿ ಕಾಣದೇ ಮಾನ್ವಿ ನ್ಯಾಯಾಲಯಕ್ಕೆ ಬಂದು ಶರಣಾಗಿ ಜಾಮೀನನ್ನು ಪಡೆದರು. ನ್ಯಾಯಾಲಯವು 1.ಸಾವಿರ ರೂ. ದಂಡವನ್ನು ವಿಧಿಸಿತು. ನಂತರ ಉಚ್ಚನ್ಯಾಯಾಲಯದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ ನನ್ನದು ಏನೂ ತಪ್ಪಿಲ್ಲಾ ವರದಿಗಾರರು ವರದಿ ಮಾಡಿದ ಆಧಾರದ ಮೇಲೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದೆ ನನ್ನನ್ನು ಪ್ರಕರಣದಿಂದ ಮುಕ್ತ ಮಾಡಿ ಎಂದು ಹೇಳಿದರೂ ಕೇಳದ ನ್ಯಾಯಾಲಯವು ಸುಪ್ರೀಂಕೋರ್ಟಿನ ನ್ಯಾಯಾಲಯದ ಆದೇಶದನ್ವಯ, ವರದಿಗಾರು ವರದಿ ತಪ್ಪು ಮಾಡಿದರೂ ಸಂಪಾದಕರು ಹೊಣೆಗಾರರು ಎಂದು ತಾಕೀತು ಮಾಡಿದಾಗ ನನ್ನದ ತಪ್ಪಾಯಿತು ಸ್ವಾಮಿ ಎಂದು ಹೇಳಿದರು. ಇದಕ್ಕೆ ನ್ಯಾಯಾಲಯವು ನಿಮ್ಮ ತಪ್ಪನ್ನು ನೀವು ಪ್ರಮಾಣ ಪತ್ರದೊಂದಿಗೆ ಮತ್ತು 1 ಲಕ್ಷ ಪರಿಹಾರವನ್ನು ಫಿರ್ಯಾಧಿದಾರ ಡಾ.ಬಸವಪ್ರಭುಪಾಟೀಲರಿಗೆ ನೀಡಬೇಕೆಂದು ತಾಕೀತು ಮಾಡಿದಾಗ ಒಪ್ಪಿಕೊಂಡ ವಿಶ್ವೇಶ್ವರ ಭಟ್ ರವರು ಚೆಕ್ ನ್ನು ನ್ಯಾಯಾಲಯದಲ್ಲಿ ನೀಡಿ ದಿನಾಂಕ 12– 7–2025 ರಂದು ನ್ಯಾಯಾಲಯಕ್ಕೆ ಪ್ರಮಾಣ ಪತ್ರಸಲ್ಲಿಸಿದರು. ಇನ್ನು ಮುಂದೆ ಡಾ.ಬಸವಪ್ರಭು ಪಾಟೀಲರ ಮೇಲೆ ಯಾವತ್ತೂ ಯಾವುದೇ ರೀತಿಯ ಆರೋಪಗಳನ್ನು ಮಾಡುವುದಿಲ್ಲಾ ಎಂದು ಪ್ರಮಾಣ ಪತ್ರ ಸಲ್ಲಿಸಿದರು. ಇದರಿಂದ ಪ್ರಕರಣವು ದಿನಾಂಕ 15– 7– 2025 ರಂದು ಪ್ರಕರಣವು ಮುಕ್ತಾಯವಾಯಿತು ಎಂದು ಎಂ.ವೀರನಗೌಡ ವಕೀಲ ಹೇಳಿದರು.

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳೇನೆಂದರೆ ವರದಿಗಳನ್ನು ಪ್ರಕಟಿಸುವಾಗ ಬರವಣಿಗೆಗಳು ಸ್ಪಷ್ಟವಾಗಿರಬೇಕು ಜನ ಸಾಮಾನ್ಯರಿಗೆ ತಿಳಿಯುವಂತಿರಬೇಕು, ವರದಿಗಳು ಸಾಕ್ಷಗಳಿಂದ ಕೂಡಿರಬೇಕು. ಸಂಪಾದಕರ ಅನುಮತಿಯನ್ನು ಪಡೆದಿರಬೇಕು ಮತ್ತು ಅವಾಚ್ಯ ಶಬ್ದಗಳಿಂದ ಯಾರನ್ನೂ ನಿಂದಿಸಬಾರದು. ಬೆದರಿಕೆ ಹಾಕಬಾರದು ಎಂಬುದು ನ್ಯಾಯಾಲಯಗಳ ಸಾರಾಂಶ, ಆದ್ದರಿಂದ ಪತ್ರಿಕಾ ಮಿತ್ರರು ಈ ಅಂಶಗಳನ್ನು ತಿಳಿದು ತಮ್ಮ ವರದಿಗಳನ್ನು ಪ್ರಕಟಿಸಬೇಕೆಂದು ಎಂ.ವೀರನಗೌಡ ಹಿರಿಯ ವಕೀಲರು ಹೇಳಿದರು. ಈ ವೇಳೆ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು, ಭೀಮನಗೌಡ ಇಟಗಿ, ದೇವೆಂದ್ರ ದುರ್ಗದ್, ನಾಗರಾಜ ಬಳಿಗಾರ, ದೊಡ್ಡಬಸನಗೌಡ ಚಿಮಲಾಪುರು ಇದ್ದರು.

# ಮಠದ ತ್ರಿವಿಧ ದಾಸೋಹ ಶ್ಲಾಘನೀಯ:ಸಿದ್ದಲಿಂಗ ಸ್ವಾಮಿಜೀ



**ಜೇವರ್ಗಿ,ಸೆ.1–** 'ಸಮಾಜದಲ್ಲಿ ಅಜ್ಞಾನ,ಮೌಢ್ಯ ತೊಲಗಬೇಕು. ವೈಚಾರಿಕತೆ ಬೆಳೆಯಬೇಕು ಎನ್ನುವ ಉದ್ದೇಶದಿಂದ ಸಮಾಜ ಸುಧಾರಣೆಗೆ ಸೊನ್ನ ಮಠದ ಶಿವಾನಂದ ಸ್ವಾಮೀಜಿ ಸಾಕಷ್ಟು ಶ್ರಮಿಸಿದ್ದಾರೆ. ಎಂದು ಯಡ್ರಾಮಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸೊನ್ನ ಗ್ರಾಮದ ಸಿದ್ದಲಿಂಗೇಶ್ವರ ವಿರಕ್ತಮಠದಲ್ಲಿ ಲಿಂ. ಶಿವಾನಂದ ಶಿವಯೋಗಿಗಳ 46ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಸೊನ್ನ ಮಠವು ಅಪರೂಪದ ಪರಂಪರೆಯನ್ನು ಹೊಂದಿದ್ದು, ತ್ರಿವಿಧ ದಾಸೋಹದ ಮೂಲಕ ಶ್ರೀಮಠವು ನಾಡಿನಾದ್ಯಂತ ಅದ್ಭುತ ಕೆಲಸಗಳನ್ನು ಮಾಡುತ್ತಿದೆ ಎಂದರು.

'ಮಠಕ್ಕೆ ನೂರಾರು ವರ್ಷಗಳ ಇತಿಹಾಸ ಇದೆ. ಶಿವಾನಂದ ಸ್ವಾಮೀಜಿ ಅವರು ಚಿಕ್ಕವಯಸ್ಸಿನಲ್ಲಿಯೇ ಸೊನ್ನ ಮಠದ ಜವಾಬ್ದಾರಿ ವಹಿಸಿಕೊಂಡು, ಸುವರ್ಣಾಕ್ಷರದಲ್ಲಿ ಬರೆದಿಡುವಂತ ಕೊಡುಗೆ ಸಮಾಜಕ್ಕೆ ನೀಡಿದ್ದಾರೆ' ಎಂದರು.

ಮಠದ ಪೀಠಾಧಿಪತಿ ಶಿವಾನಂದಜೇವರ್ಗಿ ತಾಲ್ಲೂಕಿನ ಸೊನ್ನದ ಮಠದಲ್ಲಿ ಆಯೋಜಿಸಿದ್ದ ಲಿಂ.ಶಿವಾನಂದ ಸ್ವಾಮೀಜಿ ಪುಣ್ಯ ಸ್ಮರಣೋತ್ಸವ ಸಮಾರಂಭದಲ್ಲಿ ಅನಾಥ ಮಕ್ಕಳಿಗೆ ಸಮವಸ್ತ್ರ ವಿತರಣೆ ಮಾಡಲಾಯಿತು

ಸ್ವಾಮೀಜಿ ನೇತೃತ್ವ ವಹಿಸಿದ್ದರು. ಶ್ರೀಶೈಲ ಸಾರಂಗಮಠ ಹಾಗೂ ಕಲಬುರಗಿ ಸುಲಫಲ ಮಠದ ಪೀಠಾಧಿಪತಿ ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು.ನೆಲೋಗಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ, ಜೇರಟಗಿ ವಿರಕ್ತಮಠದ ಮಹಾಂತ ಸ್ವಾಮೀಜಿ ಉಪಸ್ಥಿತರಿದ್ದರು.

ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಅವರು ಸೊನ್ನ ಶ್ರೀಗಳ ತ್ರಿಷಷ್ಠಿ– ಸಂಭ್ರಮ ಕಾರ್ಯಕ್ರಮದ ಲೋಗೋ ಬಿಡುಗಡೆ ಮಾಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯದರ್ಶಿ ರಾಜಶೇಖರ ಸಾಹು ಸೀರಿ, ಸಮಾಜದ ತಾಲ್ಲೂಕು ಅಧ್ಯಕ್ಷ ಸಿದ್ದು ಸಾಹು ಅಂಗಡಿಭಾಗವಹಿಸಿದ್ದರು.ಈ ಸಂದರ್ಭದಲ್ಲಿ ಲಿಂ.ಬಸವರಾಜ ಮಾಸ್ತರ ಮುಧೋಳ ಸ್ಮರಣಾರ್ಥ ರೋಮೇಶ ಮುಧೋಳ ಅವರು ಅನಾಥ ಮಕ್ಕಳಿಗೆ ಸಮವಸ್ತ್ರ ವಿತರಣೆ ಮಾಡಿದರು. ಗದುಗಿನ ಪುಟ್ಟರಾಜ ಶಾಸ್ತ್ರಿಗಳು ಪ್ರವಚನ ದಾಸೋಹ ಗೈದರು. ತಾ.ಪಂ ಮಾಜಿ ಸದಸ್ಯ ಶಿವಾನಂದ ಸಾಹು ಮಾಕಾ, ಶಿವಲಿಂಗ ಮುಧೋಳ, ಎಸ್.ಎಸ್.ಸಲಗರ, ಶಿವಲಿಂಗಪ್ಪ ಅಕ್ಕಿ, ವಿಜಯಕುಮಾರ ಬಿರಾದಾರ, ಶಿವಕುಮಾರ ಮುಧೋಳ, ಪ್ರಕಾಶ ಸಾಹು ಮಾಕಾ, ಶರಣು ಮಣೂರ, ರೇವಣಸಿದ್ದಪ್ಪ ಅಕ್ಕಿ, ಗುರು ಧನ್ನೂರ, ಮಲ್ಲಿಕಾರ್ಜುನ ಬಿರಾದಾರ, ಸಿದ್ದು ಆಂದೋಲಾ ಸೇರಿ ಅನೇಕರಿದ್ದರು.

# ಪ್ರಾಚಿನ ಕಾಲದ ಧಾರ್ಮಿಕ, ಆಧ್ಯಾತ್ಮಿಕ, ವಾಣಿಜ್ಯ ಕೇಂದ್ರ ಕಡಗಂಚಿ: ಮುಡುಬಿ ಗುಂಡೇರಾವ



**ಕಲಬುರಗಿ,ಸೆ.02–** ಕುಂತಲ ನಾಡಿನ ಪ್ರಮುಖ ಧಾರ್ಮಿಕ, ಆಧ್ಯಾತ್ಮಿಕ, ವಾಣಿಜ್ಯ ಕೇಂದ್ರವಾಗಿ ಕಡಗಂಚಿ ಗ್ರಾಮವು ಇತಿಹಾಸದಲ್ಲಿ ರಾರಾಜಿಸಿದೆ. ಇಲ್ಲಿನ ಶಾಸನ–ಸ್ಮಾರಕಗಳು ನಾಡಿನ ಇತಿಹಾಸವನ್ನು ಸಾರುತ್ತವೆ ಎಂದು ಎಂದು ಸಂಶೋಧಕ–ಸಾಹಿತಿ ಮುಡುಬಿ ಗುಂಡೇರಾವ ಅಭಿಮತವ್ಯಕ್ತಪಡಿಸಿದರು.

ಆಳಂದ ತಾಲೂಕಿನ ಕಡಗಂಚಿಯ ಬಕ್ಕೇಶ್ವರ ದೇವಾಲಯ ದಲ್ಲಿ'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗು ತ್ತಿರುವ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಪರಿಚಯಾತ್ಮಕ ಸರಣಿ ಕಾರ್ಯಕ್ರಮ–37ರಲ್ಲಿ ವಿಶೇಷ ಉಪನ್ಯಾಸ ನೀಡುತ್ತಾ, ಅವರು ಮಾತನಾಡುತ್ತಿದ್ದರು.

ಕಡಗಂಚಿಯ ಕ್ರಿಶ 1118ರ ಮತ್ತು 12ನೇ ಶತಮಾನದ ಶಾಸನಗಳ ಪ್ರಕಾರ, ಮಲ್ಲಿಕಾರ್ಜುನ ದೇವಾಲಯಕ್ಕೆ ಕಲ್ಯಾಣ ಚಾಲುಕ್ಯರ ಮಾಂಡಳಿಕ ಅರಸರು ಅನೇಕ ಜಮೀನುಗಳನ್ನು ದತ್ತಿಯಾಗಿ ನೀಡಿದ ಉಲ್ಲೇಖವಿದೆ. ಆಳಂದ ಸಾಸಿರ ನಾಡಿಗೆ ಸೇರಿರುವ ಈ ಭಾಗವನ್ನು ಆರನೇ ವಿಕ್ರಮಾಧಿತ್ಯನ ರಾಣಿ ಚಂದಲಾದೇವಿ ಕಡಗಂಚಿಯನ್ನು ಆಳ್ವಿಕೆ ಮಾಡಿದ್ದಾಳೆ. ಇಲ್ಲಿಯ ಸುತ್ತ–ಮುತ್ತಲಿನ ಗ್ರಾಮಗಳಾದ ನಿಂಬರ್ಗಾ, ಲಾಡ್ ಚಿಂಚೋಳಿ, ಬೋಧನ, ನರೋಣಾ, ಪಡಸಾವಳಗಿ, ಮಾಡ್ಯಾಳ್, ಹೊಡಲ್ ಸೇರಿದಂತೆ ಮುಂತಾದ ಗ್ರಾಮಗಳು ಪ್ರಾಚೀನ ಕಾಲದ ಕಲೆ,ಸಾಹಿತ್ಯ, ಸಂಗೀತ, ಚರಿತ್ರೆಯನ್ನು ತಿಳಿಸಿಕೊಡುತ್ತವೆ. ಪ್ರಭು ಕೇಶಿಮ್ ಅರಸ, ಮಲ್ಲರಸ ಇವರು ಚಿಂಚನಸೂರ ಗ್ರಾಮದ ಜಮೀನುಗಳನ್ನು ಗ್ರಾಮದ ಮಲ್ಲಿಕಾರ್ಜುನ ದೇವಾಲಯಕ್ಕೆ ಉಂಬಳಿಯಾಗಿ ನೀಡಿರುವುದು ಇತಿಹಾಸದಿಂದ ತಿಳಿಯುತ್ತದೆ. ಶಾಂತೇಶ್ವರ, ಮಲ್ಲಿಕಾರ್ಜುನ, ಬಕ್ಕೇಶ್ವರ, ಹನುಮಾನ ದೇವಾಲಯ ಮತ್ತು ಅಗಸಿ ಬಾಗಿಲಿನಲ್ಲಿ, ಹಳೆಯ ಪುಷ್ಕರಣಿ ಸೇರಿದಂತೆ ಇನ್ನಿತರ ಸ್ಮಾರಕಗಳಿವೆ ಎಂದರು.

ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಸ್ಮಾರಕಗಳ ರಕ್ಷಣೆಗೆ ಪ್ರತಿಯೊಬ್ಬರು ಪ್ರಯತ್ನಿಸಬೇಕು. ನಮ್ಮೂರಿನ ಇತಿಹಾಸದ ಬಗ್ಗೆ ಹೆಮ್ಮೆ ಪಡೆಬೇಕು. ಎಲ್ಲೆಡೆ ಜಾಗೃತಿ ಮೂಡಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಲ್ಲಯ್ಯಸ್ವಾಮಿ, ಕಾಶಿನಾಥ ಚೇಂಗಣಿ, ಪದ್ಮಣ್ಣ, ಅಜ್ಜುಸಾಬ್, ಕಲ್ಯಾಣಿ, ಪ್ರಕಾಶ್, ಶರಣಪ್ಪ, ವಿಸ್ವನಾಥ, ವಿನಾಯಕ, ಶಾಂತಪ್ಪ, ಸಿದ್ದಾರೂಡ, ಮಲ್ಲಿಕಾರ್ಜುನ, ಶಾಂತಪ್ಪ, ಮೆಹಬೂಬ್ ಸಾಬ್, ಈರಪ್ಪ, ರಾಜಕುಮಾರ,ಸಿದ್ದಲಿಂಗ, ದೇವೇಂದ್ರಪ್ಪ, ಜೈನೋದ್ದೀನ್, ಸಂತೋಷ್, ವಿಶ್ವನಾಥಸ್ವಾಮಿ, ಶಾಂತಯ್ಯಪ್ಪ, ಸಂತೋಷ, ಸಿದ್ರಾಮಪ್ಪ, ಗುರುಶಾಂತಪ್ಪ, ಶಿವರಾಜ ಇಟಕಾರ್, ಈರಣ್ಣ ಪೂಜಾರಿ, ನಾಗೇಶ್ ಕಣ್ಣಿ, ಶಾಂತಪ್ಪ ಪೂಜಾರಿ, ಶಾಮರಾವ ಇಟಕಾರ್, ಮಲ್ಲಿಕಾರ್ಜುನ ಇಟಕಾರ್, ಪ್ರಶಾಂತ, ಕಾರ್ತಿಕ ಧನ್ನಿ, ಶ್ರೀಶೈಲ್ ಧನ್ನಿ ಸೇರಿದಂತೆ ಗ್ರಾಮದನೇಕರು ಭಾಗವಹಿಸಿದ್ದರು.

# ಸಾಮಾಜಿಕ ಸಾಮರಸ್ಯಕ್ಕೆ ಧಾರ್ಮಿಕ ನಂಬಿಕೆ ಅಗತ್ಯ

**ಕಮಲಾಪುರ,ಸೆ.1–**ಗ್ರಾಮದಲ್ಲಿ ಪರಸ್ಪರ ಸೌಹಾರ್ದತೆ ಜೊತೆಗೆ ಸಾಮಾಜಿಕ ಸಾಮರಸ್ಯ ಮೂಡಲು ಜನರಲ್ಲಿ ಧಾರ್ಮಿಕ ನಂಬಿಕೆ ಅಗತ್ಯ ಎಂದು ಅವರಾದ (ಬಿ) ಚರಂತಿ ಮಠದ ಮರುಳಸಿದ್ದ ಶಿವಾಚಾರ್ಯ ತಿಳಿಸಿದರು.

ತಾಲ್ಲೂಕಿನ ಯಳವಂತಗಿ (ಬಿ) ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ವೀರ ಹನುಮಾನ ದೇವಸ್ಥಾನದ ಶ್ರಾವಣ ಮಾಸದ ಒಂದು ತಿಂಗಳ ಭಜನಾ ಮುಕ್ತಾಯ ಕಾರ್ಯಕ್ರಮ ಹಾಗೂ ಧಾರ್ಮಿಕ ಸಭೆಯಲ್ಲಿ ಅವರು ಮಾತನಾಡಿದರು.

ಶ್ರಾವಣ ಹಿಂದುಗಳಿಗೆ ಪವಿತ್ರ ಮಾಸ. ತಿಂಗಳ ಪರ್ಯಂತ ಭಜನೆ, ಕೀರ್ತನೆ ಮಾಡುತ್ತ ದೇವರ ನಾಮ ಸ್ಮರಣೆಯಲ್ಲೆ ಕಳೆಯುತ್ತೆವೆ. ಗ್ರಾಮಸ್ಥರೆಲ್ಲ ಸೇರಿ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಐಕ್ಯತೆ ಬೆಳೆಯುತ್ತದೆ. ಧರ್ಮ, ದೈವದ ನಂಬಿಕೆ ವ್ಯಕ್ತಿಯನ್ನು ಸರಿದಾರಿಗೆ ನಡೆಸುತ್ತದೆ ಎಂದರು.

ನರೋಣ ಭಜನಾ ಮಂಡಳಿ ಹಾಗೂ ಬಂಗಾರಗಿ ಭಜನಾ ಮಂಡಳಿಯವರಿಂದ ಭಜನೆ, ಸಂಗೀತ ಕಾರ್ಯಕ್ರಮ ನಡೆಯಿತು.

ಬಬಲಾದ ಗುರುಪಾದಲಿಂಗ ಶಿವಯೋಗಿ, ಹಿರನಾಗಾಂವ ಜಡೆಯ ಶಾಂತಲಿಂಗೇಶ್ವರ ಸ್ವಾಮೀಜಿ, ಹುಮನಾಬಾದ ರೇಣುಕಾ ವೀರಗಂಗಾಧರ ಶಿವಾಚಾರ್ಯರು, ಮಹಾಗಾಂವ ಕಳ್ಳಿಮಠದ ವಿರೂಪಾಕ್ಷ ದೇವರು ಹಾಗೂ ಗ್ರಾಮಸ್ಥರು ಇದ್ದರು.

ಯುವ ಮಾರ್ಗ

ಮಂಗಳವಾರ : 02–09–2025

## ಪತ್ರಕರ್ತರು ಜೊತೆಗೆ ನಿಂತರೆ ಭ್ರಷ್ಟರನ್ನು ಮಟ್ಟ ಹಾಕುವೆ

**ರಾಯಚೂರು,ಸೆ.01–**ಮಾಧ್ಯಮ ರಂಗಕ್ಕೆ ಬದುದೊಡ್ಡ ಶಕ್ತಿ ಇದೆ. ಆದ್ದರಿಂದ ಪತ್ರಕರ್ತರು ತಮ್ಮ ಜೊತೆಗಿರಬೇಕು ಎಂದು ಬಯಸುತ್ತೇನೆ. ಪತ್ರಕರ್ತರ ಸಹಕಾರವು ಸಿಕ್ಕರೆ, ಯಾರೇ ಇರಲಿ ಭ್ರಷ್ಟರನ್ನು ಮಟ್ಟ ಹಾಕುತ್ತೇನೆ ಎಂದು ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ.ವೀರಪ್ಪ ಅವರು ತಿಳಿಸಿದರು.

ಆಗಸ್ಟ್ 30 ರಂದು ಸಂಜೆ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಲಂಚದ ಅನ್ನ, ಬೇರೆಯವರ ಅನ್ನ ತಿಂದರೆ ಅದು ವಿಷತಿದ್ದಂತೆ ಎಂದು, ಪ್ರವಾಸಕ್ಕೆ ಹೋದ ಎಲ್ಲ ಕಡೆಗಳಲ್ಲಿ ನಾನು ಹೇಳುತ್ತೇನೆ. ನ್ಯಾಯಪಾಲನೆಯೇ ನನ್ನ ಗುರಿ ಎಂದು ತಿಳಿಸುತ್ತೇನೆ. ನನ್ನ ಜೊತೆಗೆ ಪತ್ರಕರ್ತರು ಬಂದರೆ, ಪತ್ರಕರ್ತರ ಸಹಕಾರ ಸಿಕ್ಕರೆ ಭ್ರಷ್ಟರ ಬಂಡವಾಳವನ್ನು ಬಯಲು ಮಾಡುತ್ತೇನೆ.

ಸ್ವಾತಂತ್ರ ?? ಹೋರಾಟದ ಸಂದರ್ಭದಲ್ಲಿ ಪತ್ರಕರ್ತರು ಸಹ ಹೋರಾಟದಲ್ಲಿ ಭಾಗಿಯಾದರು. ಮಹಾತ್ಮ ಗಾಂಧೀಜಿಯವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಹ ಪತ್ರಕರ್ತರು ಆಗಿದ್ದರು. ನನಗೆ ಪತ್ರಕರ್ತರು, ಪತ್ರಿಕಾರಂಗ, ಮಾಧ್ಯಮ ರಂಗದ ಬಗ್ಗೆ ಅಪಾರ ಅಭಿಮಾನವಿದೆ. ನಾನು ಹೋದ ಎಲ್ಲ ಕಡೆಗಳಲ್ಲಿ, ಪತ್ರಿಕಾರಂಗ ಮತ್ತು ನ್ಯಾಯಂಗವನ್ನು ಬಲಪಡಿಸಬೇಕು ಎಂದು ಸಲಹೆ ಮಾಡುತ್ತೇನೆ ಎಂದು ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ತಿಳಿಸಿದರು.

### ರಾಯಚೂರು ಜಿಲ್ಲಾ ಪತ್ರಕರ್ತರ ಸಹಕಾರಕ್ಕೆ ಮನದುಂಬಿ ವಂದಿಸಿದ ಉಪ ಲೋಕಾಯುಕ್ತರು

**ರಾಯಚೂರು,ಸೆ.01–**ರಾಯಚೂರ ಜಿಲ್ಲೆಯ ತಮ್ಮ ಪ್ರವಾಸ ಕಾರ್ಯಕ್ರಮಕ್ಕೆ ರಾಯಚೂರು ಜಿಲ್ಲೆಯ ಎಲ್ಲ ಪತ್ರಕರ್ತರಿಂದ ಅತ್ಯುತ್ತಮವಾದ ಸಹಕಾರ ಸಿಕ್ಕಿದೆ. ಎಲ್ಲ ಪತ್ರಕರ್ತ ಮಿತ್ರರಿಗೆ ಮನದುಂಬಿ ವಂದಿಸುವೆ ಎಂದು ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ತಿಳಿಸಿದರು.

ಆಗಸ್ಟ್ 30 ರಂದು ಸಂಜೆ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ರಾಯಚೂರ ಜಿಲ್ಲಾ ಪ್ರವಾಸ ಕಾರ್ಯಕ್ರಮದಲ್ಲಿ ಆಗಸ್ಟ್ 28ರಂದು ಇಡೀ ದಿನ ಹಾಗೂ ಆಗಸ್ಟ್ 29 ಮತ್ತು ಆಗಸ್ಟ್ 30ರಂದು ಕೊನೆಯ ಎರಡು ದಿನ ಬೆಳಗಿನ ಅವಧಿಯಲ್ಲಿ ಅನಿರೀಕ್ಷಿತ ಭೇಟಿ ಕಾರ್ಯಕ್ರಮಕ್ಕೆ ರಾಯಚೂರ ಜಿಲ್ಲೆಯ ಮಾಧ್ಯಮ ಪ್ರತಿನಿಧಿಗಳು ಆಗಮಿಸಿ ವರದಿ ಮಾಡಿದ್ದಾರೆ.

ರಾಜ್ಯಮಟ್ಟದ, ಪ್ರಾದೇಶಿಕ ಮತ್ತು ಸ್ಥಳೀಯ ಎಲ್ಲ ಪತ್ರಿಕೆಗಳಲ್ಲಿ, ನಮ್ಮ ಪ್ರವಾಸ ಕಾರ್ಯಕ್ರಮದ ಸುದ್ದಿಗಳಿಗೆ ವಿಶೇಷ ಸ್ಥಳವಕಾಶ ನೀಡಿ ಪ್ರಕಟಿಸಿದ್ದನ್ನು ನಾನು ಮೂರು ದಿನವೂ ಖುದ್ದು ಗಮನಿಸಿದ್ದೇನೆ. ವಿಶೇಷವಾಗಿ ಟಿವಿ ವಾಹಿನಿಯ ಪ್ರತಿನಿಧಿಗಳು ಕ್ಯಾಮರಾ ಹೊತ್ತುಕೊಂಡು ಮೂರು ದಿನವೂ ನಮ್ಮ ಜೊತೆಗೆ ಸುತ್ತಿದ್ದಾರೆ. ಟಿವಿ ವಾಹಿನಿಗಳ ವರದಿಗಾರರು ನಾನು ಇರುವ ವಾಸ್ತವ್ಯದ ಸ್ಥಳಕ್ಕೆ ಆಗಮಿಸಿ ಪ್ರವಾಸ ಕಾರ್ಯಕ್ರಮದ ಬಗ್ಗೆ ಮಾತನಾಡಿಸಿ ಟಿವಿ ವಾಹಿನಿಗಳಲ್ಲಿ ವಿಶೇಷ ವರದಿ ಪ್ರಕಟಿಸಿದ್ದಾರೆ. ರಾಯಚೂರು ಜಿಲ್ಲೆಯ ಎಲ್ಲ ಮಾಧ್ಯಮ ಪ್ರತಿನಿಧಿಗಳ ಸಹಕಾರಕ್ಕೆ ತಾವು ಕೃತಜ್ಞತೆ ಸಲ್ಲಿಸುವುದಾಗಿ ಉಪ ಲೋಕಾಯುಕ್ತರು ತಿಳಿಸಿದರು.

## ಪ್ರವಾಸೋದ್ಯಮ ಮಾರ್ಗದರ್ಶಿ ತರಬೇತಿ ಅವಧಿ ವಿಸ್ತರಣೆ

**ರಾಯಚೂರು,ಸೆ.01–**ಪ್ರವಾಸೋದ್ಯಮ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟದ ಭಾಗದ 08 ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಉತ್ತೇಜಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಒಂದು ತಿಂಗಳ ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ಸೆಪ್ಟೆಂಬರ್ 11ರವರೆಗೆ ವಿಸ್ತರಿಸಲಾಗಿದೆ.

ಅಭ್ಯರ್ಥಿಗಳಿಗೆ ಒಂದು ತಿಂಗಳ ಪ್ರವಾಸಿ ಮಾರ್ಗದರ್ಶಿ ತರಬೇತಿ ಹಾಗೂ ಈ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಜಾಕೆಟ್ ಹಾಗೂ ಒಂದು ಜೊತೆ ಸ್ಪೋರ್ಟ್ಸ್ ಶೂ ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ–11 ಹಾಗೂ ಪಂಗಡದ–09 ಗುರಿ ನಿಗದಿಪಡಿಸಲಾಗಿದ್ದು, ಪರಿಶಿಷ್ಟ ಜಾತಿ/ ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ 21 ರಿಂದ ಗರಿಷ್ಠ 48 ವಯೋಮಿತಿಯೊಳಗಿರಬೇಕು.

ಆಸಕ್ತರು ಅರ್ಜಿಗಳನ್ನು ಕಚೇರಿಯಿಂದ ಪಡೆದು ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಅರ್ಹತಾ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸೆಪ್ಟೆಂಬರ್ 11ರೊಳಗಾಗಿ ಸಲ್ಲಿಸಬಹುದಾಗಿದೆ. ಅವಧಿ ಮುಂಗಿದ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು ಜಿಲ್ಲೆ–584101, ದೂರವಾಣಿ ಸಂಖ್ಯೆ:08532200677ಗೆ ಕಚೇರಿಗೆ ಕರ್ತವ್ಯದ ವೇಳೆಯಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಜೀರ ಅಹ್ಮದ್ ಕನವಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೇದಿಕೆಯಿಂದ ನಿರ್ಗಮಿಸುವಾಗಲು ಅಹವಾಲು ಅರ್ಜಿಗಳ ಸ್ವೀಕರಿಸಿದ ಉಪ ಲೋಕಾಯುಕ್ತರು



**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.01–**ಉಪ ಲೋಕಾಯುಕ್ತರಾದ ನ್ಯಾಯ ಮೂರ್ತಿ ಬಿ ವೀರಪ್ಪ ಅವರು ಆಗಸ್ಟ್ 30ರಂದು ಸಂಜೆ, ಬಾಕಿ ಅರ್ಜಿಗಳ ವಿಚಾರಣೆ ಕಾರ್ಯ ಕ್ರಮ ಮುಕ್ತಾಯಗೊಳಿಸಿ, ವೇದಿಕೆ ಯಿಂದ ನಿರ್ಗಮಿಸುವ ಸಮಯ ದವರೆಗೂ ಅಹವಾಲು ದಾರರಿಂ ದ ದೂರು ಅರ್ಜಿ ಸ್ವೀಕರಿಸಿದರು.

ಮಧ್ಯಾಹ್ನ ಊಟದ ವಿರಾಮದ ನಂತರ ಮತ್ತೆ ವೇದಿಕೆಯತ್ತ ಆಗಮಿಸಿ ಬಾಕಿ ಅರ್ಜಿಗಳ ವಿಚಾರಣೆಯನ್ನು ಉಪ ಲೋಕಾಯುಕ್ತರು ಸಂಜೆ 7.15ರವರೆಗೆ ಮುಂದುವರೆಸಿದರು. ಇದೆ ವೇಳೆ, ಮೂರು ದಿನದ ತಮ್ಮ ಪ್ರವಾಸ ಕಾರ್ಯಕ್ರಮಗಳ ಬಗ್ಗೆ ಉಪ ಲೋಕಾಯುಕ್ತರು ಸುದ್ದಿ ಗಾರರಿಗೆ ಮಾಹಿತಿ ನೀಡಿದರು.

ರಾಯಚೂರು ಜಿಲ್ಲೆಯ ಪ್ರವಾಸದಿಂದಾಗಿ ಈ ಭಾಗದ ಜನರಿಗೆ ಅನುಕೂಲವಾಗಿದೆ ಎಂದು ಭಾವಿಸಿದ್ದೇನೆ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ದೂರು ಅರ್ಜಿಗಳು ಬಂದಿವೆ. ಕೆಲವು ಅರ್ಜಿಗಳನ್ನು ಸ್ಥಳದಲ್ಲೇ ವಿಲೇ ಮಾಡಿದ್ದೇವೆ. ಬಾಕಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸುತ್ತೇವೆ. 'ದುಷ್ಟರ ಸಂಹಾರವೇ ನನ್ನ ಗುರಿ' ಎಂಬುದಕ್ಕೆ ನಾನು ಸದಾ ಬದ್ಧನಾಗಿ ಕೆಲಸ ಮಾಡುತ್ತೇನೆ. ರಾಯಚೂರು ಜಿಲ್ಲೆಗೆ ಮತ್ತೆ ಮರಳಿ ಬ ರುತ್ತೇನೆ ಎಂದು ಇದೆ ವೇಳೆ ಉಪ ಲೋಕಾಯುಕ್ತರು ತಿಳಿಸಿದರು.

ತಮ್ಮ ಪ್ರವಾಸ ಕಾರ್ಯಕ್ರಮಕ್ಕೆ ನಿಮ್ಮೆಲ್ಲರಿಂದಲೂ ಉತ್ತಮ ಸಹಕಾರ ಸಿಕ್ಕಿದೆ. ನನಗೆ ಸಂತೋಷವಾಗಿದೆ ಎಂದು ತಿಳಿಸಿ ಉಪ ಲೋಕಾಯುಕ್ತರು ವೇದಿಕೆಯಿಂದ ನಿರ್ಗಮಿಸುವ ಹೊತ್ತಿಗೆ, 'ಸರ್ ಸರ್ ನಮ್ಮದೊಂದು ದೂರು ಇದೆ ಎಂದು' ಐದಾರು ಜನ ಮಹಿಳೆಯರು ವೇದಿಕೆಯ ಮೇಲೇರಿ ಉಪ ಲೋಕಾ ಯುಕ್ತರ ಬಳಿಗೆ ಬಂದರು. ಅರ್ಜಿ ಅಹವಾಲು ಸ್ವೀಕಾರ, ದೂರುಗಳ ವಿಚಾರಣೆ ಕಾರ್ಯಕ್ರಮ ಮುಕ್ತಾಯವಾಗಿದೆ. ನೋಂದಣಿ ಇಲ್ಲದೇ ವಿಚಾರಣೆ ನಡೆಸುವುದು ಹೇಗೆ ಎಂದು ಅವರಿಗೆ ತಿಳಿಸಿದಾಗಲು ಅರ್ಜಿದಾರರು 'ಸರ್ ಸರ್ ನಮಗೆ ನ್ಯಾಯ ಕೊಡಿ' ಎಂದು ಒತ್ತಾಯ ಮಾಡಿದರು. ಆಗ ಉಪ ಲೋಕಾಯುಕ್ತರು, 'ಸಾರ್ವಜನಿಕರ ದೂರು ಅರ್ಜಿಗಳ ನೋಂದಣಿ ಸ್ವೀಕಾರಕ್ಕೆ ಸಾಕಷ್ಟು ಸಮಯ ನೀಡಿದ್ದೆವು. ಆಗ ನೀವು ಬಂದಿಲ್ಲ. ಈಗ ಬಂದಿದ್ದೀರಿ. ಆಯ್ತು ತಾಯಿ ನಿಮ್ಮ ದೂರು ಕೊಡಿ, ನಾನು ನಿಯಮಾನುಸಾರ ಪರಿಶೀಲಿಸುತ್ತೇನೆ' ಎಂದು ತಿಳಿಸಿ ಅಹವಾಲುದಾರರಿಂದ ದೂರು ಅರ್ಜಿಯನ್ನು ಉಪ ಲೋಕಾಯುಕ್ತರೇ ಖುದ್ದು ಸ್ವೀಕರಿಸಿ ಅರ್ಜಿದಾರರಿಗೆ ಸ್ಪಂದನೆ ನೀಡಿದರು. ಆಗ ಅರ್ಜಿದಾರರು 'ಧನ್ಯವಾದಗಳು ಸರ್' ಎಂದು ಉಪ ಲೋಕಾಯುಕ್ತರಿಗೆ ನಮಸ್ಕಾರ ತಿಳಿಸಿದರು. ರಾಷ್ಟ್ರಗೀತೆಯೊಂದಿಗೆ ಉಪ ಲೋಕಾಯುಕ್ತರ ಪ್ರವಾಸ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.

**ಹೊರಗಡೆ ಎಲ್ಇಡಿ ಸ್ಕ್ರೀನ್:** ಉಪ ಲೋಕಾಯುಕ್ತರ ಅಹವಾಲು ಅರ್ಜಿ ಸ್ವೀಕಾರ ಮತ್ತು ಬಾಕಿ ಅರ್ಜಿಗಳ ವಿಚಾರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿದ್ದರಿಂದ ಅವರಿಗೆ ಅನುಕೂಲವಾಗಲು ಹೊರಗಡೆ ದೊಡ್ಡದಾದ ಎಲ್ಇಡಿ ಸ್ಕ್ರೀನ್ ಅಳವಡಿಸಿ ಕಾರ್ಯಕ್ರಮದ ವೀಕ್ಷಣೆಗೆ ಅನುಕೂಲ ಕಲ್ಪಿಸಲಾಗಿತ್ತು.

**ಕೆಲಸ ಮಾಡಲು ಹುಮ್ಮಸ್ಸು:** ಬೆಂಗಳೂರಿನ ಉಪ ಲೋಕಾಯುಕ್ತ ಕಚೇರಿಯ ಅಪರ ನಿಬಂಧಕರು ಆಗಿರುವ ನ್ಯಾಯಾಧೀಶರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಉಪ ನಿಬಂಧಕರು ಆಗಿರುವ ನ್ಯಾಯಾಧೀಶರಾದ ಅರವಿಂದ, ರಾಯಚೂರಿನ ಹಿರಿಯ ದಿವಾಣಿ ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್, ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ, ಲೋಕಾಯುಕ್ತ ಡಿಎಸ್ಪಿಗಳಾದ ರವಿ ಪರುಷೋತ್ತಮ ಮತ್ತು ವಸಂತಕುಮಾರ ಅವರು ಮತ್ತು ಲೋಕಾಯುಕ್ತ ಕಚೇರಿಯ ಪೊಲೀಸ್ ನಿರೀಕ್ಷಕರು ಹಾಗೂ ಬೆಂಗಳೂರು ಮತ್ತು ರಾಯಚೂರು ಲೋಕಾಯುಕ್ತ ಕಚೇರಿಯ ಎಲ್ಲ ಸಿಬ್ಬಂದಿ ಜೊತೆಗಿದ್ದು ಪ್ರವಾಸ ಕಾರ್ಯಕ್ರಮ ಯಶಗೊಳಿಸಿದ್ದಾರೆ. ಅವರ ಸಹಕಾರದಿಂದ ಮತ್ತಷ್ಟು ಕೆಲಸ ಮಾಡುವ ಹುಮ್ಮಸ್ಸು ಬಂದಿದೆ ಎಂದು ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಸುದ್ದಿಗಾರರಿಗೆ ತಿಳಿಸಿದರು.

ರೈಲು ಮೂಲಕ ನಿರ್ಗಮನ: ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಹೊಸ ಅತಿಥಿಗೃಹದಲ್ಲಿ ಮೂರು ದಿನಗಳ ಕಾಲ ವಾಸ್ತವ್ಯ ಮಾಡಿದ್ದ ಉಪ ಲೋಕಾಯುಕ್ತರಾದ ಬಿ ವೀರಪ್ಪ ಅವರು ಕೊನೆಯ ದಿನ ಕಾರ್ಯಕ್ರಮದ ಮುಕ್ತಾಯದ ಬಳಿಕ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಊಟ ಮುಗಿಸಿ, ಕೃಷಿ ಆವರಣದಿಂದ ನಿರ್ಗಮಿಸಿ ರಾತ್ರಿ 10.30ರ ವೇಳೆಗೆ ರಾಯಚೂರು ರೈಲು ನಿಲ್ದಾಣಕ್ಕೆ ಆಗಮಿಸಿದರು. ರಾತ್ರಿ 11.15ರ ಸುಮಾರಿಗೆ ಆಗಮಿಸಿದ ಹಾಸನ ರೈಲು ಮೂಲಕ ಉಪ ಲೋಕಾಯುಕ್ತರು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು. ನ್ಯಾಯಾಧೀಶರಾದ ರಮಾಕಾಂತ ಚವ್ಹಾಣ್, ಶಿವಾಜಿ ಅನಂತ ನಲವಾಡೆ, ಅರವಿಂದ ಅವರು ಸಹ ಉಪ ಲೋಕಾಯುಕ್ತರೊಂದಿಗೆ ಬೆಂಗಳೂರಿಗೆ ತೆರಳಿದರು. ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಭಜಂತ್ರಿ, ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಸತೀಶ್ ಬಿ.ಚಿಟುಗುಬ್ಬಿ, ಲೋಕಾಯುಕ್ತ ಡಿಎಸ್ಪಿಗಳಾದ ರವಿ ಪರು ಷೋತ್ತಮ, ವಸಂತಕುಮಾರ, ತಹಸೀಲ್ದಾರ ಸುರೇಶ ವರ್ಮಾ ಹಾಗೂ ಲೋಕಾಯುಕ್ತ ಕಚೇರಿಯ ಪೊಲೀಸ್ ನಿರೀಕ್ಷಕರು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪ ಲೋಕಾಯುಕ್ತರಿಗೆ ಬೀಳ್ಕೊಟ್ಟರು.

# ರಾಯಚೂರು ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ



**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.01–**ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಕ್ರೀಡಾ ಪ್ರಾಧಿಕಾರ ಬೆಂಗಳೂರು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರಾಯ ಚೂರು ಇವರ ಸಹಯೋ ಗದಲ್ಲಿ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಯ ಚೂರು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂ ಟಕ್ಕೆ ಆಗಸ್ಟ್ 31ರಂದು ಚಾಲನೆ ನೀಡಲಾಯಿತು.

ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ ಅವರು ಮಾತನಾಡಿ, ಪ್ರತಿಯೊಬ್ಬರ ಜೀವನದಲ್ಲಿ ಕ್ರೀಡೆಗಳು ಮಹತ್ವ ಪಡೆದುಕೊಳ್ಳುತ್ತವೆ. ಓದು–ಬರಹದ ಜತೆ ಕ್ರೀಡೆಗಳಲ್ಲಿ ಭಾಗವಹಿಸುವವರ ಜೀವನ ಪರಿಪೂರ್ಣವಾಗಿರುತ್ತದೆ. ಕ್ರೀಡಾಪಟುಗಳು ಶಿಸ್ತನ್ನು ಸಹ ಮೈಗೂಡಿಸಿಕೊಳ್ಳುವುದು ಮುಖ್ಯ. ಹಾಗೆ ಮಾಡುವುದರಿಂದ ಕ್ರೀಡೆಯಲ್ಲಿ ಯಶಸ್ಸಿನ ಜತೆ ಜೀವನದಲ್ಲಿ ಸಾಧನೆ ಮಾಡಿದಂತಾಗುತ್ತದೆ ಎಂದರು.

ಈ ವೇಳೆ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತಗೇರಿ ಅವರು ಮಾತನಾಡಿ, ಕ್ರೀಡೆಯಲ್ಲಿ ಸೋಲು–ಗೆಲುವು ಸಹಜ. ಅವುಗಳಿಗೆ ಅಂಜದೇ ಪ್ರತಿಯೊಬ್ಬರು ಕ್ರೀಡಾ ಸ್ಫೂರ್ತಿ ಬೆಳೆಸಿಕೊಂಡು ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವೀರೇಶ ನಾಯಕ ಅವರು ಮಾತನಾಡಿ, ಈಗಾಗಲೇ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟ ಯಶಸ್ವಿಯಾಗಿ ನೆರವೇರಿಸಲಾಗಿದ್ದು, ತಾಲ್ಲೂಕು ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದು, ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವಿಜೇತರಾದವರು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿ, ನಂತರ ವಿಭಾಗದ ಮಟ್ಟದ ವಿಜೇತ ಕ್ರೀಡಾಪಟುಗಳು ರಾಜ್ಯಮ ಟ್ಟದ ದಸರಾ ಕ್ರೀಡಾಕೂಟಕ್ಕೆ ಆಯ್ಕೆಯಾಗುವರು. ರಾಜ್ಯಮಟ್ಟದ ದಸರಾ ಕ್ರೀಡಾಕೂಟವು ಸೆಪ್ಟೆಂಬರ್ 22 ರಿಂದ 25 ರವರೆಗೆ ಮೈಸೂರಿನ ಚಾಮುಂಡಿ ವಿಹಾರದ ಕ್ರೀಡಾಂಗಣದಲ್ಲಿ ನಡೆಯ ಲಿದೆ ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಪುರುಷರು ಹಾಗೂ ಮಹಿಳಾ ಕ್ರೀಡಾಪಟುಗಳು ಆನ್‌ಲೈನ್ ನೋಂದಣಿ ಮಾಡಿಕೊಂಡಿದ್ದಾರೆ. ಹೆಚ್ಚು ಕ್ರೀಡಾಪುಟಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಹೇಳಿದರು.

ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಅಥ್ಲೆಟಿಕ್ಸ್, ವಾಲಿಬಾಲ್, ಖೋಖೋ, ಕಬಡ್ಡಿ ಬ್ಯಾಸ್ಕೆಟ್ ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಥ್ರೋಬಾಲ್, ಬಾಲ್ ಬ್ಯಾಡ್ಮಿಂಟನ್ ಸೇರಿದಂತೆ ವಿವಿಧ ವಿಭಾಗಗಳ ಸ್ಪರ್ಧೆಗಳಲ್ಲಿ ಪುರುಷ ಮತ್ತು ಮಹಿಳಾ ಸ್ಪರ್ಧಿಗಳು ಹುಮ್ಮಸ್ಸಿನಿಂದ ಭಾಗವಹಿಸಿ ಗೆಲುವಿಗಾಗಿ ಸೆಣಸಾಡಿದರು. ಇದೇ ಸಂದರ್ಭದಲ್ಲಿ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಪರಶುರಾಮ ಸೇರಿದಂತೆ ಇತರರು ಇದ್ದರು.

## ಪ್ರಾಮಾಣಿಕತೆ ಮೈಗೂಡಿಸಿಕೊಳ್ಳುವುದಾಗಿ ಅಧಿಕಾರಿಗಳಿಂದ ವಚನ



**ಯುವ ಮಾರ್ಗ ಸುದ್ದಿ**

**ರಾಯಚೂರು,ಸೆ.01–** ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಾಗಿ ರಾಯಚೂರು ಜಿಲ್ಲೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾತು ಕೊಟ್ಟಿದ್ದಾರೆ ಎಂದು ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಬಿ ವೀರಪ್ಪ ಅವರು ಹೇಳಿದರು.

ಆಗಸ್ಟ್ 30 ರಂದು ಸಂಜೆ ಕೃಷಿ ವಿವಿಯ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಭ್ರಷ್ಟಾಚಾರ ತಡೆಯಲು ಕೈಜೋಡಿಸಿ' ಎನ್ನುವ ಲೋಕಾಯುಕ್ತ ಅಧಿಕಾರಿಗಳ ದೂರವಾಣಿ ಮತ್ತು ಲೋಕಾಯುಕ್ತ ಕಚೇರಿಯ ವಿಳಾಸ ಹೊಂದಿದ ಫಲಕಗಳನ್ನು ಎಲ್ಲ ಕಚೇರಿಗಳಲ್ಲು ಅಳವಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಈಗಾಗಲೇ ಬಹುತೇಕ ಕಚೇರಿಗಳಲ್ಲಿ ಈ ಫಲಕ ಅಳವಡಿಸಲಾಗಿದೆ ಎಂದರು.

ಕಚೇರಿ ಕಾರ್ಯದಲ್ಲಿ ಶಿಸ್ತು ಮತ್ತು ಅಧಿಕಾರಿಗಳು ಹಾಗೂ ಸಿಬ್ಬಂದಿಯಲ್ಲಿ ಶ್ರದ್ಧೆ ಇರಬೇಕು. ಅಂದಾಗ ಕಚೇರಿಯ ಎಲ್ಲ ಕೆಲಸ ಕಾರ್ಯಗಳು ಸುಗಮವಾಗಿ ನಡೆದು ಜನತೆಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗುತ್ತದೆ. ಈ ರೀತಿ ಬದಲಾವಣೆ ಆಗುವ ವಿಶ್ವಾಸವನ್ನು ಇಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ವ್ಯಕ್ತಪಡಿಸಿದ್ದಾರೆ ಎಂದು ಉಪ ಲೋಕಾಯುಕ್ತರು ತಿಳಿಸಿದರು.

## 2 ದಿನದ ಹೆಣ್ಣು ಮಗುವಿನ ಜೈವಿಕ ಪಾಲಕರ ಪತ್ತೆಗೆ ಮನವಿ

**ರಾಯಚೂರು,ಸೆ.01–** ಜಿಲ್ಲೆಯ ದೇವದುರ್ಗ ತಾಲೂಕಿನ ಗೋಪುಳಪೂರ ಗ್ರಾಮದ ಹಳ್ಳದ ಪಕ್ಕದಲ್ಲಿ ಆಗಸ್ಟ್ 15ರಂದು ಸುಮಾರು 2 ದಿನದ ಹೆಣ್ಣು ಮಗುವನ್ನು ಯಾರೋ ಬಿಟ್ಟು ಹೋಗಿದ್ದು, ಮಗುವಿನ ಜೈವಿಕ ಪಾಲಕರು ಪತ್ತೆಗೆ ಕೋರಲಾಗಿದೆ.

ಸಾರ್ವಜನಿಕರು ಮಗು ಅಳುವುದನ್ನು ಗಮನಿಸಿ ಮಗುವನ್ನು ರಕ್ಷಿಸಿ ದೇವದುರ್ಗ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ತಾಲ್ಲೂಕು ವೈದ್ಯಾಧಿಕಾರಿಗಳು ಮಕ್ಕಳ ಸಹಾಯವಾಣಿ ಘಟಕಕ್ಕೆ ಕರೆ ಮಾಡಿ ತಿಳಿಸಲಾಗಿದ್ದು, ನಂತರ ಮಕ್ಕಳ ಸಹಾಯವಾಣಿ ಸಿಬ್ಬಂದಿಯವರು ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಿ ನಂತರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರ ನಿರ್ದೇಶದಂತೆ ಶಿಶು ಅಭಿವೃದ್ಧಿ ಯೋಜನೆ ದೇವದುರ್ಗ ಸಿಬ್ಬಂದಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ ಘಟಕ ಸಿಬ್ಬಂದಿಗಳ ಸಹಕಾರದಲ್ಲಿ ಈ ಮಗುವನ್ನು ಪೋಷಣೆ ಮತ್ತು ರಕ್ಷಣೆಗಾಗಿ ರಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಈ ಮಗುವಿನ ಜೈವಿಕ ಪಾಲಕರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯಲಯ, ಮನೆ ಸಂಖ್ಯೆ 1–9–138, ಆಜಾದ ನಗರ, ಪಶ್ಚಿಮ ಪೊಲೀಸ್ ಠಾಣೆ ಹಿಂದುಗಡೆ, ಮಾರಮ್ಮ ಗುಡಿ ಹತ್ತಿರ, ರಾಯಚೂರು ಇಲ್ಲಿಗೆ ಸಂಪರ್ಕಿಸುವಂತೆ ಕೋರಲಾಗಿದ್ದು, ಜೈವಿಕ ಪಾಲಕರು ಪತ್ತೆಯಾಗದಿದ್ದಲ್ಲಿ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವತಿಯಿಂದ ಕಾನೂನಿನಾತ್ಮಕವಾಗಿ ದತ್ತು ಪ್ರಕ್ರಿಯೆಗೆ ಒಳಪಡಿಸಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕಚೇರಿಯ ದೂರವಾಣಿ ಸಂಖ್ಯೆ: 08532–2262266, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು **ಮೊಬೈಲ್ ಸಂಖ್ಯೆ:**7829981827, ರಕ್ಷಣಾಧಿಕಾರಿ (ಅಸಾಂಸ್ಥಿಕ) ಮೊಬೈಲ್ ಸಂಖ್ಯೆ: 8660627793ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೀನುಗಾರಿಕೆ ಇಲಾಖೆಯಿಂದ ಸಹಾಯಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಸೆ.01–**ಇಲ್ಲಿನ ಮೀನುಗಾರಿಕೆ ಇಲಾಖೆಯಿಂದ 2025–26ನೇ ಸಾಲಿಗೆ ನಾಲ್ಕು ಚಕ್ರ ವಾಹನ ಖರೀದಿಸಲು ಸಹಾಧನಕ್ಕಾಗಿ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಇಲಾಖೆಯಿಂದ ಪರಿಶಿಷ್ಟ ಜಾತಿಯ 02 ಮತ್ತು ಪರಿಶಿಷ್ಟ ಪಂಗಡದ 01 ಗುರಿ ನಿಗದಿಪಡಿಸಲಾಗಿದೆ. ಖರೀದಿಸಿದ ವಾಹನಕ್ಕೆ ಶೇಕಡಾ 50 ಅಥವಾ ಗರಿಷ್ಠ 3 ಲಕ್ಷರೂ.ವರೆಗೆ ಸಹಾಯಧನ ನೀಡಲಾಗುತ್ತಿದ್ದು, ಆಸಕ್ತರು ಸೆಪ್ಟೆಂಬರ್ 20ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರ ಮೊಬೈಲ್ ಸಂಖ್ಯೆ: 9901244116, ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ರಾಯಚೂರು, ದೇವದುರ್ಗ, ಮಾನವಿ ಮೊಬೈಲ್ ಸಂಖ್ಯೆ:8050196667, ಮೀನುಗಾರಿಕೆ ಇಲಾಕೆಯ ಸಹಾಯಕ ನಿರ್ದೇಶಕರು ಸಿಂಧನೂರು, ಲಿಂಗಸೂಗೂರು, ಮಸ್ಕಿ ಮೊಬೈಲ್ ಸಂಖ್ಯೆ: 9110878145ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H